ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜುಲೈ 2021
ಬೆಲೆ ರೂ. 1

## ಕೇಂದ್ರ ನೂತನ ಸಚಿವ ಸಂಪುಟದಲ್ಲಿ ಕನ್ನಡಿಗ ಸಚಿವರು



ಶೋಭಾ ಕರಂದ್ಲಾಜೆ



ಶ್ರೀ ಭಗವಂತ್ ಖೂಬಾ



ಶ್ರೀ ಎ. ನಾರಾಯಣಸ್ವಾಮಿ



ಶ್ರೀ ರಾಜೀವ್ ಚಂದ್ರಶೇಖರ್

## ಒರಿಯಾ ಕವಿಗೆ ಒಲಿದ ಕುವೆಂಪು ರಾಷ್ಟ್ರೀಯ ಪುರಸ್ಕಾರ



# ಇನ್ನು ನೆನಪು




ಕನ್ನಡದ ಹಿರಿಯ ಸಾಹಿತಿ ಡಾ. ಕೆ. ಸಿದ್ದಲಿಂಗಯ್ಯ ಅವರು ಈಚೆಗೆ ನಮ್ಮನ್ನಗಲಿದ್ದಾರೆ. ಸಿದ್ದಲಿಂಗಯ್ಯ ಅವರು ದಿನಾಂಕ 31.01.2019 ರಂದು ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಡಾ. ಬಸವರಾಜ ಕಟ್ಟೀಮನಿ ಜನ್ಮ ಶತಮಾನೋತ್ಸವದ ಅಂಗವಾಗಿ ನಡೆದ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು. ಚಿತ್ರದಲ್ಲಿ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಸಿದ್ದಲಿಂಗಯ್ಯ ಅವರಿಗೆ ಸ್ಮರಣಿಕೆ ನೀಡಿ ಗೌರವಿಸಿದ ಸಂದರ್ಭವನ್ನು ಕಾಣಬಹುದು.



ರಾಷ್ಟ್ರಪ್ರಶಸ್ತಿ ವಿಜೇತ ಪ್ರತಿಭಾವಂತ ನಟ ಸಂಚಾರಿ ವಿಜಯ್ ಇತ್ತೀಚೆಗೆ ನಮ್ಮನ್ನಗಲಿದ್ದಾರೆ. 2014ರಲ್ಲಿ ಅವರು ರಾಷ್ಟ್ರಪ್ರಶಸ್ತಿ ಸ್ವೀಕರಿಸಲು ದೆಹಲಿ ಬಂದಾಗ ದೆಹಲಿ ಕರ್ನಾಟಕ ಸಂಘದ ಅಭಿನಂದನೆಯನ್ನು ಸ್ವೀಕರಿಸಿದ್ದರು. ಚಿತ್ರದಲ್ಲಿ ಅಂದಿನ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಹಾಲಿ ಉಪಾಧ್ಯಕ್ಷ ಮತ್ತು ಅಂದಿನ ಕೋಶಾಧಿಕಾರಿ ಡಾ. ಅವನೀಂದ್ರನಾಥ್ ರಾವ್ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಕಾಣಬಹುದು.

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ



ಪ್ರಧಾನ ಸಂಪಾದಕ

ಡಾ. ಅವನೀಂದ್ರನಾಥ್ ರಾವ್

ಸಂಪಾದಕ ಮಂಡಳ ಸದಸ್ಯರು

ಚಂದ್ರಶೇಖರ ಜೋಳದರಾಶಿ

ಎಸ್. ಕುಮಾರ್

ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ

ಅಧ್ಯಕ್ಷ

ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು

ಡಾ. ಅವನೀಂದ್ರನಾಥ್ ರಾವ್

ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ

ಸಿ.ಎಂ. ನಾಗರಾಜ

ಕೋಶಾಧಿಕಾರಿ

ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು

ರಾಧಾಕೃಷ್ಣ

ಪೂಜಾ ರಾವ್

ಸಮಿತಿ ಸದಸ್ಯರು

ಡಾ. ಎಂ.ಎಸ್. ಶಶಿಕುಮಾರ್

ಶಿವಾನಂದ ಎಸ್. ಇಂಗಳೇಶ್ವರ

ಶ್ರೀನಾಥ್ ಎನ್.ಆರ್

ಸವಿತಾ ನೆಲ್ಲಿ

ಶಿವಪ್ಪ ಎಂ.

ಸಂತೋಷ ಜೆ.

ಶೋಭಾ ಗೌಡ

ಸುಮಿತಾ ಮುರಗೋಡ

ಆರ್. ರೇಣುಕುಮಾರ್

ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ

ಅನಂತರಾಮು ಅರಳ

ಡಿ.ವಿ.ಎಸ್. ಮೂರ್ತಿ

ಈಶ್ವರ ಮಡಿವಾಳ



ಸಂಪುಟ 31 । ಸಂಚಿಕೆ 10

ಜುಲೈ 2021


## ಸಂಪಾದಕೀಯ

# ಸಾಹಿತಿ ಮತ್ತು ಕಲಾವಿದರಿಗೆ ಅಳಿವಿಲ್ಲ

ತಮ್ಮ ಕಾಲದ ಸನ್ನಿವೇಶ ಮತ್ತು ಘಟನೆಗಳನ್ನು ತಮ್ಮ ಅಪೂರ್ವ ರಚನೆಗಳ ಮೂಲಕ ಪ್ರತಿಫಲಿಸುವ ಕಾರಣದಿಂದಲೂ ಸಾಹಿತಿ ಮತ್ತು ಕಲಾವಿದರ ಕೊಡುಗೆಗಳು ಮಹತ್ವಪೂರ್ಣವೆನಿಸಿದೆ. ತನ್ನ ಅಪೂರ್ವ ಕಲಾಕೃತಿಗಳ ಮೂಲಕ ಕಲಾವಿದ ಮತ್ತು ತನ್ನ ಅನನ್ಯ ಸಾಹಿತ್ಯ ಸೃಷ್ಟಿಯ ಮೂಲಕ ಸಾಹಿತಿ ತಾನು ಅಳಿದ ಮೇಲೂ ಶತ ಶತಮಾನಗಳ ಮೂಲಕ ಜೀವಂತವಾಗಿ ಉಳಿಯಬಲ್ಲ. ಈ ಕಾರಣದಿಂದ ಈ ಬಗೆಯ ಸಾಹಿತಿ ಮತ್ತು ಕಲಾವಿದರನ್ನು ಚಿರಂಜೀವಿಗಳು ಎನ್ನಬೇಕು.

ಒಬ್ಬ ನಟನಾಗಿ ಕನ್ನಡಕ್ಕೆ ಮೂರನೇ ರಾಷ್ಟ್ರಪ್ರಶಸ್ತಿ ತಂದುಕೊಟ್ಟ ಸಂಚಾರಿ ವಿಜಯ್ ಮತ್ತು ಸಾಹಿತಿಯಾಗಿ ಕನ್ನಡ ಸಾರಸ್ವತ ಲೋಕದಲ್ಲಿ ಹೊಸ ಪರಿವರ್ತನೆಯನ್ನು ತಂದುಕೊಟ್ಟ ಹಿರಿಯ ಕವಿ ಡಾ. ಕೆ. ಸಿದ್ಧಲಿಂಗಯ್ಯನವರು ಮೇಲಿನ ವಿಚಾರಕ್ಕೆ ಉತ್ತಮ ನಿದರ್ಶನ. ಈಚೆಗೆ ಈ ಇಬ್ಬರನ್ನೂ ನಾಡು ಕಳೆದುಕೊಂಡಿದ್ದು ಈ ಮೂಲಕ ನಮ್ಮ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕ ಬರಿದಾಗಿದೆ.

ನಟ ಸಂಚಾರಿ ವಿಜಯ್ ಅವರದ್ದು ಅಕಾಲಿಕ ನಿಧನ. ಅವರು ಬದುಕಿದ್ದರೆ ಇನ್ನೂ ಅನೇಕ ಸಾಧನೆಗಳ ಮೂಲಕ ರಂಗಭೂಮಿ ಮತ್ತು ಚಿತ್ರರಂಗವನ್ನು ಬೆಳಗುತ್ತಿದ್ದರು. ಅವರ ಅಗಲಿಕೆ ಕನ್ನಡದ ಪ್ರತಿಭಾವಂತ ನಟರಾಗಿದ್ದ ದಿ. ಶಂಕರ್‌ನಾಗ್ ಅವರ ಆಕಸ್ಮಿಕ ಸಾವಿನ ನೆನಪನ್ನು ಮಾಡಿಕೊಟ್ಟಿತು. ಶಂಕರ್‌ನಾಗ್ ಅವರೂ ಕೂಡಾ ಅಲ್ಪ ಅವಧಿಯಲ್ಲಿ ಉನ್ನತ ಸಾಧನೆಗಳನ್ನು ಮಾಡಿ ರಾಷ್ಟ್ರಮಟ್ಟದಲ್ಲಿ ಮಿಂಚಿ ಮರೆಯಾಗಿದ್ದನ್ನು ಇಲ್ಲಿ ಸ್ಮರಿಸಬಹುದು.



'ನಾನು ಅವನಲ್ಲ, ಅವಳು' ಚಿತ್ರದಲ್ಲಿ ನಟ ಸಂಚಾರಿ ವಿಜಯ್

ಕನ್ನಡ ಸಾಹಿತ್ಯಲೋಕದಲ್ಲಿ ಪ್ರಗತಿಪರ ಮತ್ತು ಜನಪರ ಚಿಂತನೆಗಳಿಗೆ ಚಾಲನೆ ನೀಡಿದ ಮೇರು ಸಾಹಿತಿಗಳಲ್ಲಿ ಕೆ. ಸಿದ್ದಲಿಂಗಯ್ಯ ಪ್ರಮುಖರು. ಸಾಹಿತಿಯಾಗಿ, ಪ್ರಾಧ್ಯಾಪಕರಾಗಿ ಮತ್ತು ಆಡಳಿತಗಾರನಾಗಿಯೂ ಅವರ ಕೊಡುಗೆಗಳು ಬಹು ಆಯಾಮವನ್ನು ಪಡೆದಿವೆ. ವ್ಯಕ್ತಿಯೊಬ್ಬನ ಪ್ರತಿಭೆ, ಸಾಧನೆಗಳಿಗೆ ಆತನ ಜೀವಿತ ಕಾಲದಲ್ಲಿ ಮನ್ನಣೆ ಸಿಗಬೇಕು. ಆತ ಅಳಿದ ಮೇಲೆ ಗುಣಗಾನ ಮಾಡಿದರೆ ಏನೂ ಉಪಯೋಗವಿಲ್ಲ ಎಂಬುದನ್ನು ಕವಿ ಸಿದ್ದಲಿಂಗಯ್ಯನವರು ಕಾವ್ಯದ ಮೂಲಕ ಹೇಳುತ್ತಾರೆ.

ನೀವು ಹೂಮಾಲೆ ಹೊದಿಸುವಿರಿ
ನೋಡಲಾದೀತೇನೂ ನನಗೆ
ಚಂದನೆಯ ಹೂವೊಂದ ಈಗಲೇ
ನೀಡಲಾಗದೇ

ಎನ್ನುವ ಕವಿ ಸಿದ್ದಲಿಂಗಯ್ಯನವರ ಈ ಕವಿತೆಯ ಸಾಲುಗಳು ಮಾರ್ಮಿಕವಾಗಿದೆ ಮತ್ತು ಸಾರ್ವಕಾಲಿಕ ಸತ್ಯವೆನಿಸಿದೆ.

ನಟ ಸಂಚಾರಿ ವಿಜಯ್ ಮತ್ತು ಕವಿ ಸಿದ್ದಲಿಂಗಯ್ಯನವರು ತಮ್ಮ ಪ್ರತಿಭೆ ಮತ್ತು ಸಾಧನೆಗಳಿಂದ ಚಿರಕಾಲ ಜನಮಾನಸದಲ್ಲಿ ಇರಬಲ್ಲರು. ಅವರ ಕ್ರಿಯಾಶೀಲ ಬದುಕು ನಮಗೆ ಪ್ರೇರಣೆ ನೀಡಲಿ ಎಂದು ಆಶಿಸುವ. ಅವರಿಗೆ ನಮನಗಳು.

ಡಾ. ಅವನೀಂದ್ರನಾಥ್ ರಾವ್

## ನಮ್ಮನಮ್ಮೊಳಗೆ

# ದೆಹಲಿ ಕನ್ನಡಿಗರ ಕನಸುಗಳು

ಈ ಕೊರೊನಾದ ಕಾಲದಲ್ಲಿ ಇತರ ಎಲ್ಲ ಗಲಿಬಿಲಿಗಳ ನಡುವೆಯೂ ದೆಹಲಿಯಲ್ಲಿ ಇನ್ನೂ ಪೂರಾ ಎತ್ತಂಗಡಿಯಾಗದ ಲಾಕ್‌ಡೌನ್ ನಿಯಮಾವಳಿಗಳ ನಡುವೆ ನಾವೆಲ್ಲ ಖಾಲಿಯಾದ ಮನದಲ್ಲಿ ಕನ್ನಡದ ಕನಸು ಕಾಣುವುದು ಸಹಜ. ಮನೆಯಿಂದ ಹೊರಬಿದ್ದರೆ ಇನ್ನೊಂದು ಪ್ರಪಂಚ. ಹೀಗೆ ನಾವು ನಮ್ಮೊಳಗೆ ಒಂದೇ ಕಾಲದಲ್ಲಿ ಹಲವಾರು ಪ್ರಪಂಚಗಳಲ್ಲಿ ಬದುಕುವ ಕಲೆಯನ್ನು ರೂಢಿಸಿಕೊಂಡು ಬಿಟ್ಟಿದ್ದೇವೆ. ದೆಹಲಿ ಕನ್ನಡಿಗರು ಹಲವಾರು ಬಗೆಗಳಲ್ಲಿ ಈ ಕನಸುಗಳ ಪ್ರಪಂಚದಲ್ಲಿ ಸಿಲುಕಿಕೊಂಡಿದ್ದಾರೆ. ಹಾಡು, ಸಂಗೀತ ಒಂದು ಬಗೆಯದಾದರೆ ಕನ್ನಡದ ಪುಸ್ತಕಗಳನ್ನು ಓದುವುದು ಇನ್ನೊಂದು ಬಗೆ. ಇನ್ನು ಹಲವರಿಗೆ ಕನ್ನಡದ ಹೊಸ ಮತ್ತು ಹಳೆಯ ಸಿನಿಮಾಗಳನ್ನು ನೋಡುವ ಮೂಲಕ ಕನ್ನಡದ ಪ್ರಪಂಚದಲ್ಲಿ ಹರಿದಾಡುವ ಮನಸ್ಸು. ಜಾಲತಾಣಗಳಲ್ಲಿ ಹರಿದಾಡುವ ಸಂದೇಶಗಳನ್ನು ಗಮನಿಸಿದರೆ ಇದು ನಮಗೆ ಸ್ಪಷ್ಟವಾಗುತ್ತದೆ. ಇನ್ನು ಮುಂದೆ ಬರಲಿದೆಯೆಂಬ ಕೊರೊನಾದ ಮೂರನೇಯ ಅಲೆಗೆ ಸಿದ್ಧತೆಗಳನ್ನು ಮಾಡಿಕೊಳ್ಳುವ ಉತ್ಸಾಹ ಯಾರಿಗೂ ಈ ಸಂದರ್ಭದಲ್ಲಿ ಇಲ್ಲವೆಂದೆ ಹೇಳಬೇಕು. ಇನ್ನೆಷ್ಟು ಈ ಕೊರೊನಾದ ಅಲೆಗಳು ಬರಲಿವೆಯೆಂಬುದನ್ನು ಕಾಲವೇ ಹೇಳಬೇಕು. ಈ ಕೊರೊನಾ ಅಲೆಗಳ ಮೇಲೆ ಸವಾರಿ ಮಾಡುವ ಕಲೆಯನ್ನು ಮಾನವಕುಲ ಕರಗತ ಮಾಡಿಕೊಳ್ಳುವುದು ಅನಿವಾರ್ಯವಾಗುವ ಸನ್ನಿವೇಶಗಳು ಸೃಷ್ಟಿಯಾಗುತ್ತಿರುವ ಲಕ್ಷಣಗಳು ಕಾಣುತ್ತಿವೆ. ನಮ್ಮ ಬದುಕು ಕಳೆದ ಹತ್ತಾರು ತಿಂಗಳುಗಳಲ್ಲಿ ನಮಗರಿವಿಲ್ಲದ ಪರಿಯಲ್ಲಿ ಬದಲಾಗುತ್ತ ಸಾಗುತ್ತಿರುವುದನ್ನು ನಾವು ಕಂಡುಕೊಳ್ಳುತ್ತಿದ್ದೇವೆ.

ಈ ಎಲ್ಲದರ ನಡುವೆ ಜನಸಮುದಾಯಗಳು ತಮ್ಮ ಬದುಕನ್ನು ಎಂದಿನಂತೆ ಕಟ್ಟಿಕೊಳ್ಳುವ ಪ್ರಯತ್ನದಲ್ಲಿವೆ. ದೆಹಲಿಯಿಂದ ಕರ್ನಾಟಕದತ್ತ ಹೋಗಬೇಕಾದ ಸಂದರ್ಭದಲ್ಲಿ ಇದನ್ನು ನಾನು ಗಮನಿಸಿದ್ದೇನೆ. ದೆಹಲಿಯ ರಸ್ತೆಗಳ ಮೇಲೆ ವಾಹನ ಮತ್ತು ಜನಗಳ ಸಂಚಾರ ಸಾಕಷ್ಟು ಮಾಮೂಲಿಯೆನಿಸುವ ಮಟ್ಟಿಗೆ ದಟ್ಟವಾಗಿದೆ. ಮಹಾರಾಷ್ಟ್ರದಿಂದ ಕರ್ನಾಟಕದತ್ತ ಹೋಗುವವರಿಗೆ ಎಪ್ಪತ್ತೆರಡು ಗಂಟೆಗಳ ಒಳಗೆ ಪಡೆದ ಕೊರೊನಾದ ನೆಗೆಟಿವ್ ವರದಿ ಅಗತ್ಯವೆಂಬುದನ್ನು ನಾನು ವೆಬ್‌ಚೆಕ್ ಮಾಡುವಾಗ ಆ ವಿಮಾನ ಕಂಪನಿಯು ಬಾರಿಬಾರಿ ಎಚ್ಚರಿಕೆಯನ್ನು ನೀಡುವುದರ ಜೊತೆಗೆ ಕೊರೊನಾದ ಲಕ್ಷಣಗಳು ನನಗೆ ಇಲ್ಲದಿರುವುದರ ಕುರಿತಾಗಿ ಪೂರಾ ಒಂದು ಪುಟದ (ಇಂಗ್ಲೀಷನಲ್ಲಿ) ಒಪ್ಪಂದಕ್ಕೆ ನಾವು ಒಪ್ಪಿಗೆ ಸೂಚಿಸಬೇಕಾಯಿತು. ಈ ಒಪ್ಪಂದದ ಮಾಹಿತಿಯಲ್ಲಿ ಏನಾದರೂ ಸುಳ್ಳಿದ್ದರೆ ಅದರ ಸಂಪೂರ್ಣ ಜವಾಬ್ದಾರಿ ನಮ್ಮದೆ ಆಗಿರುವುದರ ಬಗ್ಗೆ ತಾಕೀತು ಮಾಡಲಾಗಿತ್ತು. ವಿಮಾನ ನಿಲ್ದಾಣವಂತೂ ಯಾವುದೊ ಯುದ್ಧಕ್ಕೆ ಸನ್ನದ್ಧವಾದ ಜಾಗೆಯಂತಿತ್ತು. ನನ್ನ ಚೆಕ್‌ಇನ್ ಲಗ್ಗೇಜಿಗೆ ಮೊದಲು ಔಷಧಿಯ ಸ್ನಾನ, ನಂತರ ನಾನು ಔಷಧಿಯಲ್ಲಿ ಕೈತೊಳೆದುಕೊಂಡ ಮೇಲೆ ಮತ್ತೊಬ್ಬ ನನ್ನ ಉಷ್ಣಾಂಶವನ್ನು ಅಳೆಯುವವ. ವಿಮಾನ ನಿಲ್ದಾಣದ ಒಳಕ್ಕೆ ಧ್ವನಿವರ್ಧಕದಲ್ಲಿ ನಿರಂತರವಾದ ಕೊರೊನಾ ಕುರಿತಾಗಿ ತೆಗೆದುಕೊಳ್ಳಬೇಕಾದ ಎಚ್ಚರಿಕೆಯ ಮಾತುಗಳು ಜಾಗಟೆಯಂತೆ ಕಿವಿಗಳನ್ನು ಅಪ್ಪಳಿಸುತ್ತಿದ್ದವು. ಮುಖಕವಚಗಳ ಪದರುಗಳು ಉಸಿರಾಡಿಸಲು ಆಗದಷ್ಟು ದಟ್ಟವಾಗಿತ್ತು. ಹುಬ್ಬಳ್ಳಿಯಲ್ಲಿ ವಿಮಾನದಿಂದ ಇಳಿದು ಊರಿನತ್ತ ಹೋಗುತ್ತಿರುವಾಗ ಅಲ್ಲಿಯೂ ಸಹ ಜನಜಂಗುಳಿ, ವಾಹನಗಳ ಓಡಾಟವೆಲ್ಲವೂ, ಲಾಕ್‌ಡೌನ್ ಜಾರಿಯಲ್ಲಿದ್ದರೂ, ಸಹಜ ಸ್ಥಿತಿಯಲ್ಲೆ ಇದ್ದದ್ದನ್ನು ಕಂಡು ಆಶ್ಚರ್ಯವಾಯಿತು. ಮೋಡಗಳು ತೆಳುವಾಗಿ ಹರಡಿ, ತಂಪಾದ ಮಳೆಗಾಲ ತಂಗಾಳಿ ಎಲ್ಲೆಡೆ. ದಾರಿಯುದ್ದಕ್ಕೂ ಹೊಲಗಳಲ್ಲಿ ಮೊಳಕೆಯೊಡೆದು ತಲೆಯೆತ್ತೊಡಗಿದ್ದ ಪೈರುಗಳು ಮತ್ತೊಮ್ಮೆ ಮಳೆಯ ಬರುವಿಕೆಗೆ ಕಾದು ಕುಳಿತಂತೆ ಕಾಣುತ್ತಿತ್ತು. ಉದ್ದಕ್ಕೂ ಹೆಣ್ಣುಮಕ್ಕಳು ಹೊಲದಲ್ಲಿ ಮಣ್ಣನ್ನು ಪೇರಿಸುವ, ಕಳೆಗಳನ್ನು ತೆಗೆದು ಹಾಕುತ್ತ ಸಂಜೆಯ ಕತ್ತಲು ಆವರಿಸತೊಡಗಿದ್ದರೂ ಕೆಲಸ ಮಾಡುತ್ತಿರುವ ದೃಶ್ಯಾವಳಿ ನನ್ನ ಮನದಾಳದಲ್ಲಿ ತುಂಬಿಕೊಳ್ಳತೊಡಗಿತ್ತು. ಇಲ್ಲೆಲ್ಲಾ ಕೆಲ ದಿನಗಳ ಹಿಂದಿನ ಭೀಕರ ಕೊರೊನಾದ ಹಾವಳಿ ಮರೆಯಾಗಿ ಹೋದಂತೆ ಕಾಣುತ್ತಿತ್ತು. ಸಂಜೆ ಏಳರ ಹೊತ್ತಿಗೆ ಕಲಘಟಗಿಯನ್ನು ಹಾದು ಮುಖ್ಯ ಹೈವೇ ಯನ್ನು ಬಿಟ್ಟು ಯಲ್ಲಾಪುರ ಪಟ್ಟಣದೊಳಕ್ಕೆ ಬರುವ ಹೊತ್ತಿಗೆ ಅಂಗಡಿ ಮುಗ್ಗಟ್ಟುಗಳೆಲ್ಲ, ಕರ್ನಾಟಕದ ಕೊರೊನಾ ಲಾಕ್‌ಡೌನ್ ನಿಯಮಾವಳಿಗಳ ಪ್ರಕಾರ, ಮುಚ್ಚಲ್ಪಟ್ಟಿದ್ದವು. ಮಳೆಯ ತುಂತುರ ಹನಿಗಳ ಮಧ್ಯೆ ಮಲೆನಾಡಿನ ಹೃದಯದಲ್ಲಿರುವ ಈ ಪುಟ್ಟ ಪಟ್ಟಣ ನಿಧಾನವಾಗಿ ಪಸರಿಸುತ್ತಿರುವ ಕತ್ತಲಿನೊಳಕ್ಕೆ ನಿದ್ರೆಗೆ ಜಾರುವಂತಿತ್ತು. ಕರ್ನಾಟಕದಲ್ಲಿನ (ಬಹುಶಃ ಇಡಿ ದೇಶದಲ್ಲಿನ) ಅತ್ಯಂತ ಹೆಚ್ಚಿನ ಪೊಸಿಟಿವಿಟಿ ರೇಟ್ (54%) ನನ್ನ ಜಿಲ್ಲೆ ಉತ್ತರ ಕನ್ನಡದ್ದಾಗಿತ್ತೆಂದರೆ ನಿಮಗೆಲ್ಲರಿಗೂ ಆಶ್ಚರ್ಯವಾಗದಿರದು. ಅಲ್ಲಿ ಮನೆಮನೆಗಳಲ್ಲಿ, ಹಳ್ಳಿಹಳ್ಳಿಗಳಲ್ಲಿ ಕೊರೊನಾದ ಕೇಸುಗಳು ಎರಡನೇಯ ಅಲೆಗಳಲ್ಲಿ ತುಂಬಿಹೋಗಿದ್ದವು. ಆದರೆ, ಹೆಚ್ಚು ಹಾನಿ ಮಾಡದೆ, ಅದು ಕಡಿಮೆಯಾದದ್ದು ಪವಾಡವೆ ಸರಿ. 'ಜನ ಮಳ್ಳೊ, ಜಾತ್ರೆ ಮಳ್ಳೊ' ಎಂಬ ಅಲ್ಲಿನ ಗಾದೆಮಾತಿನಂತೆ ಜನ ಮದುವೆ ಮುಂಜಿಗಳಿಗೆ ಮುಗಿ ಬಿದ್ದದ್ದು ಕೊರೊನಾದ ಪಸರಿಸುವಿಕೆಗೆ ಕಾರಣವಾಯಿತೆಂದು ಸರಕಾರ ಹೇಳಿದ್ದನ್ನು ಜನ ಇಲ್ಲವೆಂದು ಅಲ್ಲಗೆಳೆಯಲಿಲ್ಲ. ಈಗ ಬದುಕು ಅಲ್ಲಿ ಮತ್ತೆ ನಿರಾಳವಾಗ ತೊಡಗಿದೆ. ಆದರೆ, ಕೊರೊನಾದ ನಂತರದ ಆಯಾಸದ ಸಮಸ್ಯೆಗಳು ಜನರನ್ನು ಇನ್ನೂ ಕಾಡುತ್ತಿವೆ. ಅಲ್ಲಿನ ಹಲವು ಹಿರಿಯ ಚೇತನಗಳು ಅಗಲಿ ಹೋದದ್ದು ಇನ್ನೂ ಜನಮಾನಸದಲ್ಲಿ ಹಸಿರಾಗಿದೆ.

ಒಟ್ಟಾರೆ ಕರ್ನಾಟಕದ ಕೊರೊನಾದ ಕತೆಯಿದು ಎಂದರೆ ತಪ್ಪಾಗದು. ಈ ಎಲ್ಲದರ ನಡುವೆ ಗಡಿನಾಡಿನಲ್ಲಿರುವ ಕಾಸರಗೋಡಿನ ಹಲವಾರು ಹಳ್ಳಿಗಳ ಕನ್ನಡದ ಹೆಸರುಗಳನ್ನು ಮಲಯಾಳೀಕರಿಸುವುದರ ಬಗ್ಗೆ ಸಾಕಷ್ಟು ವಿವಾದಗಳು ಎದ್ದಿವೆ. ಕೇರಳ ಸರಕಾರ ಇದು ಸುಳ್ಳೆಂದು ಹೇಳಿ, ಈ ವಿವಾದಕ್ಕೆ ತೆರೆಯೆಳೆಯಲು ಪ್ರಯತ್ನಿಸಿದೆ. ಹಲವಾರು ವರದಿಗಳ ಪ್ರಕಾರ ಹಳ್ಳಿಗಳ ಹೆಸರು ಬದಲಿಸುವ ಪ್ರಕ್ರಿಯೆ ಕಾಸರಗೋಡಿನಲ್ಲಿ ನಡೆದಿದೆ ಎಂಬುದಕ್ಕೆ ಪುರಾವೆಗಳಿವೆ. ಇದನ್ನು ನಾವೆಲ್ಲರೂ ಸಾರಾಸಗಟಾಗಿ ಖಂಡಿಸಬೇಕು. ಕಾಸರಗೋಡು ಜಿಲ್ಲೆಯ ಮಂಜೇಶ್ವರದ ಶಾಸಕರಾದ ಅಶ್ರಫರವರು ಕೇರಳ ವಿಧಾನಸಭೆಯಲ್ಲಿ ಕನ್ನಡದಲ್ಲಿ ಪ್ರಮಾಣ ವಚನ ಸ್ವೀಕರಿಸುವ ಮೂಲಕ ತಮ್ಮ ಕನ್ನಡತನವನ್ನು ಮೆರೆದಿದ್ದನ್ನು ನಾವು ನೆನಪಿಸಿಕೊಳ್ಳಬೇಕು. ಈ ಶಾಸಕರೂ ಸಹ ಈ ಬಗೆಯ ಬದಲಾವಣೆಗಳ (ಒಮ್ಮೆ ಆಗಿದ್ದಲ್ಲಿ) ವಿರುದ್ಧ ಹೋರಾಡುವುದಕ್ಕೆ ತಮ್ಮ ಬೆಂಬಲವನ್ನು ಸೂಚಿಸಿದ್ದಾರೆ. ಈ ವಿವಾದಕ್ಕೆ ಅಂತಿಮವಾದ ತೆರೆ ಬೀಳಲಿ ಎಂದು ನಾವೆಲ್ಲರೂ ಆಶಿಸೋಣ. ಆದರೆ, ಈ ಬಗೆಯ ಹಳ್ಳಿಗಳ ಹೆಸರುಗಳ ಬದಲಾವಣೆಯನ್ನು ಅವುಗಳನ್ನು ನಾಮಫಲಕಗಳಲ್ಲಿ ನಮೂದಿಸುವ ರೀತಿಯಲ್ಲಿ ಆಗುತ್ತಿರುವ ಪರಿಯನ್ನು ಪ್ರಜಾವಾಣಿಯ ವಾಚಕರವಾಣಿಯಲ್ಲಿ ಪತ್ರ ಬರೆದವರೊಬ್ಬರು ವಿವರ ನೀಡಿದ್ದಾರೆ. ಅವರು ನೀಡಿದ ಒಂದು ಉದಾಹರಣೆಯ ಪ್ರಕಾರ ರಾಷ್ಟ್ರೀಯ ಹೆದ್ದಾರಿ 04 ರ (ಶಿರಾ ತಾಲೂಕಿನ) ಕಳ್ಳಂಬೆಳ್ಳದ ಬಳಿ ಇರುವ ಹೆದ್ದಾರಿಯ ಸುಂಕದ ಕಟ್ಟೆಯ ಬಳಿ ಇರುವ 'ಕರೆಜವನಹಳ್ಳಿ'ಯ ಹೆಸರನ್ನು 'ಕರಜೀವನಹಳ್ಳಿ' ಎಂದು ನಮೂದಿಸಲಾಗಿದೆ. ಬಹುಶಃ ಸುಂಕದ ಕಟ್ಟೆಯಿದೆಯೆಂದು ಹೀಗೆ ಮಾಡಿರಬೇಕುಂಬುದು ಅವರ ಅನುಮಾನ. ಆದರೆ, ಪ್ರತಿಯೊಂದು ಹಳ್ಳಿಗಳ ಹೆಸರುಗಳ ಹಿಂದೆ ಇತಿಹಾಸವಿದೆಯೆಂಬುದನ್ನು ನಾವು ಮರೆಯಬಾರದೆಂಬುದು ಅವರ ವಿಚಾರ. 'ಕರೆಜವನಹಳ್ಳಿ'ಯೆಂಬುದು ಯಮಧರ್ಮರಾಯನ ನೆನೆಪಿಗೆ ಇಟ್ಟ ಹೆಸರೆಂಬುದನ್ನು ಅವರು ನೆನೆಪಿಸುತ್ತಾರೆ. 'ಕರೆಜವ' ಎಂಬುದು ಯಮನಿಗೆ ಇದ್ದ ಹೆಸರು. ಸರಕಾರಗಳು ಇವುಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಚರಿತ್ರೆಗಳನ್ನು ಯಾರಿಗೂ ಅರಿವಾಗದ ರೀತಿಯಲ್ಲಿ ಬದಲಿಸುವ ಕೆಲಸವಾಗಬಾರದು.

***ಡಾ. ವೆಂಕಟಾಚಲ ಹೆಗಡೆ***
***ಅಧ್ಯಕ್ಷರು***

## ಮುನ್ನೋಟ

ಆತ್ಮೀಯ ಕನ್ನಡ ಬಂಧುಗಳೇ,

ದೆಹಲಿ ಕರ್ನಾಟಕ ಸಂಘದಲ್ಲಿ ಸಕ್ರಿಯವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಬೇಕಾಗಿತ್ತು. ಆದರೆ ಮಾರಕ ರೋಗ ಕೊರೊನಾದಿಂದ ಕಾರ್ಯಕ್ರಮಗಳನ್ನು ಆಯೋಜಿಸಲು ಸಾಧ್ಯವಾಗುತ್ತಿಲ್ಲ. ಕಾರಣ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಿಯಮಾವಳಿ ಪ್ರಕಾರ ಎಲ್ಲ ಕಾರ್ಯಕ್ರಮಗಳನ್ನು ಮುಂದೂಡಿದ್ದೇವೆ. ಸದ್ಯಕ್ಕೆ ದೆಹಲಿಯಲ್ಲಿ ಕೊರೊನಾ ಕೇಸ್‌ಗಳು ಕಡಿಮೆಯಾಗುತ್ತಾ ಹೋಗುತ್ತಿವೆ. ಮೊದಲು ಇದ್ದ ಆತಂಕ ಈಗ ಕಡಿಮೆಯಾಗಿ, ನಮ್ಮ ಎಲ್ಲ ಕನ್ನಡಿಗರು ಸುರಕ್ಷಿತವಾಗಿದ್ದಾರೆ ಎಂದುಕೊಂಡಿದ್ದೇನೆ.

ಸಂಘದ ಇತರೆ ಎಲ್ಲ ಕೆಲಸ ಕಾರ್ಯಗಳು ನಡೆಯುತ್ತಿವೆ. ಈಗಾಗಲೇ ಹೊಸ ಕಾರ್ಯಕಾರಿ ಸಮಿತಿಯ ಆಯ್ಕೆ ಪ್ರಕ್ರಿಯೆಗೆ ಚುನಾವಣಾ ಅಧಿಕಾರಿಯನ್ನು ನೇಮಿಸಲಾಗಿದ್ದು, ನಾಮಪತ್ರ ಸಲ್ಲಿಸುವಿಕೆಯ ಪ್ರಕ್ರಿಯೆ ಪೂರ್ಣಗೊಂಡಿದ್ದು, ಕೊರೊನಾ ಕಾರಣದಿಂದಾಗಿ ಚುನಾವಣೆಯನ್ನು ಮುಂದೂಡಿರುವುದು ತಮಗೆಲ್ಲಾ ತಿಳಿದಿದೆ. ಬರುವ ದಿನಗಳಲ್ಲಿ ಚುನಾವಣೆಯ ದಿನಾಂಕವನ್ನು ತಮಗೆ ತಿಳಿಸಲಾಗುವುದು.

ಮುಂಬರುವ ದಿನಗಳಲ್ಲಿ ಎಲ್ಲಾ ಸದಸ್ಯರುಗಳ ಬಾಳಲ್ಲಿ ಬೆಳಕನ್ನು ತರಲಿ. ಈಗಾಗಲೇ ಕೆಲ ಸದಸ್ಯರುಗಳು ನಮ್ಮನ್ನು ಬಿಟ್ಟು ಅಗಲಿದ್ದಾರೆ. ಅವರಿಗೆ ಮೋಕ್ಷ ದೊರಕಲಿ. ಕುಟುಂಬದವರಿಗೆ ದುಃಖ ಭರಿಸುವ ಶಕ್ತಿ ನೀಡಲಿ.

ತಜ್ಞರ ಪ್ರಕಾರ ಮೂರನೇ ಅಲೆ ಮಕ್ಕಳಿಗೆ ತುಂಬಾ ಅಪಾಯವಿದೆ ಎಂದು ಹೇಳುತ್ತಿದ್ದಾರೆ. ಅದು ಸುಳ್ಳಾಗಲಿ. ಎಲ್ಲಾ ಮಕ್ಕಳು ಸುರಕ್ಷಿತವಾಗಿರಲಿ. ಶುಭವಾಗಲಿ.

ಎಲ್ಲಾ ಕನ್ನಡಿಗರು ತಪ್ಪದೆ ಲಸಿಕೆಯನ್ನು ಹಾಕಿಸಿಕೊಳ್ಳಿ.

ಮಾನ್ಯ ಕೇಂದ್ರ ಮಂತ್ರಿಗಳಾದ ಸನ್ಮಾನ್ಯ ಶ್ರೀ ಸದಾನಂದ ಗೌಡರು ಎರಡು ಬಾರಿ ಕೇಂದ್ರ ಸಚಿವರಾಗಿ ಉತ್ತಮ ಕಾರ್ಯನಿರ್ವಹಿಸಿ ಸಚಿವ ಸಂಪುಟದಿಂದ ಹೊರಗೆ ಬಂದಿದ್ದಾರೆ. ಸಂಘದ ಜೊತೆಗಿನ ಅವರ ಸಂಬಂಧ ಸಕ್ರಿಯವಾಗಿದ್ದು ಸಂಘದ ಬಳಿ ಇರುವ ಮೆಟ್ರೋ ಸ್ಟೇಷನ್‌ಗೆ 'ಸರ್. ಎಂ. ವಿಶ್ವೇಶ್ವರಯ್ಯ ಮೆಟ್ರೋ ಸ್ಟೇಷನ್' ಎಂದು ಹೆಸರಿಡಲು ತುಂಬಾ ಶ್ರಮಿಸಿದವರಲ್ಲಿ ಇವರು ಒಬ್ಬರು.

ಇದೀಗ ವಿಸ್ತಾರಗೊಂಡ ಕೇಂದ್ರ ಸಚಿವ ಸಂಪುಟಕ್ಕೆ ಕರ್ನಾಟಕದಿಂದ ಮಾನ್ಯ ಶೋಭಾ ಕರಂದ್ಲಾಜೆ, ಶ್ರೀ ಎ. ನಾರಾಯಣಸ್ವಾಮಿ, ಶ್ರೀ ಭಗವಂತ್ ಖೂಬಾ ಮತ್ತು ಶ್ರೀ ರಾಜೀವ್ ಚಂದ್ರಶೇಖರ್ ಇವರುಗಳು ಸಚಿವರಾಗಿ ಹೊಸದಾಗಿ ಸೇರ್ಪಡೆಗೊಂಡಿದ್ದಾರೆ. ಈ ನಾಲ್ಕು ಮಂತ್ರಿಗಳಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಮತ್ತು ಸಂಘದ ಪರವಾಗಿ ಶುಭಾಶಯಗಳನ್ನು ಕೋರುತ್ತಿದ್ದೇನೆ.

*ಸಿ.ಎಂ. ನಾಗರಾಜ*
*ಪ್ರಧಾನ ಕಾರ್ಯದರ್ಶಿ*

## ಕೇಂದ್ರ ನೂತನ ಸಚಿವ ಸಂಪುಟದಲ್ಲಿ ಕನ್ನಡಿಗ ಸಚಿವರು

ಕೇಂದ್ರ ಸಚಿವ ಸಂಪುಟ ಪುನರ್ ರಚನೆಯಲ್ಲಿ ನಾಲ್ವರು ಕನ್ನಡಿಗರು ನೂತನ ಸಚಿವರಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಕೇಂದ್ರ ರಾಜ್ಯ ಸಚಿವರಾಗಿ ಉಡುಪಿ-ಚಿಕ್ಕಮಗಳೂರು ಸಂಸದೆ ಸನ್ಮಾನ್ಯ ಶೋಭಾ ಕರಂದ್ಲಾಜೆ (ಕೃಷಿ ಮತ್ತು ರೈತರ ಕಲ್ಯಾಣ), ರಾಜ್ಯ ಸಭಾ ಸದಸ್ಯ ಸನ್ಮಾನ್ಯ ರಾಜೀವ ಚಂದ್ರಶೇಖರ್ (ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ, ಇಲೆಕ್ಟ್ರಾನಿಕ್ ಮತ್ತು ಐ.ಟಿ.), ಚಿತ್ರದುರ್ಗ ಸಂಸದ ಸನ್ಮಾನ್ಯ ಎ. ನಾರಾಯಣಸ್ವಾಮಿ (ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ) ಹಾಗೂ ಬೀದರ್ ಸಂಸದ ಸನ್ಮಾನ್ಯ ಭಗವಂತ ಖೂಬಾ (ಹೊಸ ನವೀಕರಿಸಬಹುದಾದ ಶಕ್ತಿ, ರಾಸಾಯನಿಕ ಮತ್ತು ರಸಗೊಬ್ಬರ) ಅವರು ಪ್ರಮಾಣವಚನ ಸ್ವೀಕರಿಸಿದ್ದಾರೆ. ಸನ್ಮಾನ್ಯ ಪ್ರಹ್ಲಾದ್ ಜೋಷಿ ಅವರು ಈಗಾಗಲೇ ಕೇಂದ್ರ ಸಂಸದೀಯ ವ್ಯವಹಾರ, ಉಕ್ಕು ಮತ್ತು ಗಣಿಕಾರಿಕೆ ಸಚಿವರಾಗಿ ಮುಂದುವರಿದಿದ್ದಾರೆ.

ನೂತನ ಸಚಿವರಾಗಿ ಅಧಿಕಾರ ಸ್ವೀಕರಿಸಿದ ಇವರಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು.

## ಶ್ರದ್ಧಾಂಜಲಿ


### ಡಾ. ಸಿದ್ದಲಿಂಗಯ್ಯ



ಹಿರಿಯ ಕವಿ, ಸಾಹಿತಿ ಡಾ. ಸಿದ್ದಲಿಂಗಯ್ಯ ಅವರು ದಿನಾಂಕ 11.06.2021 ರಂದು ನಿಧನರಾಗಿದ್ದಾರೆ. ನಾಟಕ, ಪ್ರಬಂಧ, ವಿಮರ್ಶೆ, ಸಂಶೋಧನೆ, ಆತ್ಮಕಥನ ಮುಂತಾದ ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿದ್ದರು. ಎರಡು ಬಾರಿ ವಿಧಾನಪರಿಷತ್ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದರು. 2014ರಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಅವರು ರಾಜ್ಯೋತ್ಸವ ಪ್ರಶಸ್ತಿ, ನೃಪತುಂಗ ಪ್ರಶಸ್ತಿಗೆ ಭಾಜನರಾಗಿದ್ದರು. ಹಿರಿಯ ಕವಿ ಡಾ. ಸಿದ್ದಲಿಂಗಯ್ಯ ಅವರಿಗೆ ದೆಹಲಿ ಕರ್ನಾಟಕ ಸಂಘ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

### ಸಂಚಾರಿ ವಿಜಯ್



ರಾಷ್ಟ್ರಪ್ರಶಸ್ತಿ ವಿಜೇತ ಪ್ರತಿಭಾವಂತ ನಟ ಸಂಚಾರಿ ವಿಜಯ್ ಅವರು ಅವರು ದಿನಾಂಕ 14.06.2021 ರಂದು ನಿಧನರಾಗಿದ್ದಾರೆ. ರಸ್ತೆ ಅಪಘಾತದಿಂದ ವಿಧಿವಶರಾದ ಅವರ ನಿಧನ ಅಭಿಮಾನಿಗಳಿಗೆ ಅಪಾರ ನೋವನ್ನು ತಂದಿದೆ.

2014ರಲ್ಲಿ 'ನಾನು ಅವನಲ್ಲ, ಅವಳು' ಚಿತ್ರದ ನಟನೆಗಾಗಿ ರಾಷ್ಟ್ರಪ್ರಶಸ್ತಿ ಸ್ವೀಕರಿಸಲು ದೆಹಲಿಗೆ ಬಂದಿದ್ದ ನಟ ವಿಜಯ್ ಅವರು ದೆಹಲಿ ಕರ್ನಾಟಕ ಸಂಘದ ಅಭಿನಂದನೆಯನ್ನು ಸ್ವೀಕರಿಸಿದ್ದರು.

ವಿಜಯ್ ಅವರ ನಿಧನ ಚಲನಚಿತ್ರ ರಂಗಕ್ಕೆ ತುಂಬಲಾರದ ನಷ್ಟ. ಅವರಿಗೆ ದೆಹಲಿ ಕರ್ನಾಟಕ ಸಂಘ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

# ಡಾ. ರಾಜೇಂದ್ರ ಕಿಶೋರ್ ಪಂಡಾ ಅವರಿಗೆ ಕುವೆಂಪು ರಾಷ್ಟ್ರೀಯ ಪುರಸ್ಕಾರ



ಒರಿಯಾ ಕವಿ ಡಾ. ರಾಜೇಂದ್ರ ಕಿಶೋರ್ ಪಂಡಾ ಅವರನ್ನು 2020ರ ಸಾಲಿನ ಕುವೆಂಪು ರಾಷ್ಟ್ರೀಯ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ. ಕುವೆಂಪು ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಹಂಪನಾ ಅವರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯ ಸಭೆ ನಡೆದಿದ್ದು, ಸದಸ್ಯರಾಗಿ ಕವಿ ಹೆಚ್. ಎಸ್. ಶಿವಪ್ರಕಾಶ್, ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಮತ್ತು ಬೆಂಗಾಳ ಸಾಹಿತಿ ಶ್ಯಾಮಲ್ ಭಟ್ಟಾಚಾರ್ಯ ಹಾಗೂ ಸಮಿತಿಯ ಸಂಚಾಲಕರಾಗಿ ಕಡಿದಾಳ್ ಪ್ರಕಾಶ್ ಭಾಗವಹಿಸಿದ್ದರು.

ಆಯ್ಕೆ ಸಮಿತಿಯು 2020ರ ಸಾಲಿನ ಕುವೆಂಪು ರಾಷ್ಟ್ರೀಯ ಪುರಸ್ಕಾರಕ್ಕಾಗಿ ಡಾ. ರಾಜೇಂದ್ರ ಕಿಶೋರ್ ಪಾಂಡಾ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಿರುತ್ತದೆ. ಪುರಸ್ಕೃತರಿಗೆ ಐದು ಲಕ್ಷ ರೂಪಾಯಿ ನಗದು ಮತ್ತು ಪದಕವನ್ನು ನೀಡಿ ಗೌರವಿಸಲಾಗುವುದು.

ವೃತ್ತಿಯಿಂದ ಐ.ಎ.ಎಸ್. ಅಧಿಕಾರಿಯಾಗಿದ್ದ ಡಾ. ರಾಜೇಂದ್ರ ಕಿಶೋರ್ ಪಂಡಾ (ಜನನ : 24-06-1944), 1975ರಲ್ಲಿ 'ಗೌಣ್ ದೇವತಾ' ಎಂಬ ಕವನ ಸಂಕಲನ ಪ್ರಕಟಿಸುವುದರೊಂದಿಗೆ ಸಾಹಿತ್ಯ ಕ್ಷೇತ್ರಕ್ಕೆ ತೆರೆದುಕೊಂಡವರು. ಆಧುನಿಕ ಒರಿಯಾ ಸಾಹಿತ್ಯ ಕ್ಷೇತ್ರದಲ್ಲಿ ಡಾ. ರಾಜೇಂದ್ರ ಕಿಶೋರ್ ಪಂಡಾ ಅವರದು ಮುಂಚೂಣಿಯ ಹೆಸರು. ಅವರು ಹದಿನಾರು ಕವನ ಸಂಕಲನಗಳು ಮತ್ತು 'ಚಿದ್‌ಅಭಾಸ್' ಎಂಬ ಒಂದು ಕಾದಂಬರಿಯನ್ನು ಪ್ರಕಟಿಸಿರುವುದಲ್ಲದೆ 'ಕವಿತಾಯಾನ್' ಮತ್ತು ವೃಣಮಾಲಾ ಎಂಬ ಎರಡು ಅಂತರ್‌ಜಾಲ ಕಾವ್ಯ ಸಂಚಯಗಳನ್ನು ಸಂಪಾದಿಸಿದ್ದಾರೆ. 'ದಿ. ಕೋಗಿಟೊಕ್ರಾಟ್' ಎಂಬ ಅಂತರ್‌ಜಾಲ ಪತ್ರಿಕೆಯ ಸಂಪಾದಕರಾಗಿಯೂ ಕೆಲಸ ಮಾಡಿದ್ದಾರೆ. ಒರಿಯಾ ಭಾಷೆಗೆ ಇವರು ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ, 1985ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1994-96ರ ಅವಧಿಗೆ ಭಾರತ ಸರ್ಕಾರದ ಸಂಸ್ಕೃತಿ ಇಲಾಖೆಯಿಂದ 'ಸೀನಿಯರ್ ಫೆಲೋಶಿಪ್ ಫಾರ್ ಲಿಟರೇಚರ್' ಪುರಸ್ಕಾರ. ಸಂಬಲ್ಪುರ್ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ (2004). ಗಂಗಾಧರ್ ರಾಷ್ಟ್ರೀಯ ಪುರಸ್ಕಾರ (2010) ಮೊದಲಾದ ಗೌರವಗಳು ಸಂದಿರುತ್ತವೆ.

ರಾಜೇಂದ್ರ ಕಿಶೋರ್ ಪಂಡಾ ಅವರು ಒರಿಸ್ಸಾದ ಸಂಬಲ್ಪುರ್ ಜಿಲ್ಲೆಯ ಬಟಲಗಾ ಎಂಬ ಹಳ್ಳಿಯಲ್ಲಿ 24.06.1944ರಲ್ಲಿ ಜನಿಸಿದರು. 1956-57ರಲ್ಲಿ ಹಿರಾಕುಡ್ ಅಣೆಕಟ್ಟು ಯೋಜನೆಗಾಗಿ ಒಕ್ಕಲೆಬ್ಬಿಸಿದ 285 ಹಳ್ಳಿಗಳ ಪೈಕಿ ಬಟಲಗಾ ಗ್ರಾಮವೂ ಇತ್ತು. ಆ ಯೋಜನೆಯ ಸುಮಾರು 22000 ಸಂತ್ರಸ್ತ ಕುಟುಂಬಗಳಲ್ಲಿ ಇವರ ಕುಟುಂಬವೂ ಒಂದು! ಆ ಎಲ್ಲ ಗೋಜು ಗೊಂದಲಗಳ ನಡುವೆಯೇ ಅಲಹಬಾದ್ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡೆಯುವಲ್ಲಿ ರಾಜೇಂದ್ರ ಅವರು ಯಶಸ್ವಿಯಾದರು. 1967ರಲ್ಲಿ ಐ.ಎ.ಎಸ್. ಪರೀಕ್ಷೆಯನ್ನು ಗೆದ್ದು, 2004ರವರೆಗೂ ಅಧಿಕಾರಿಯಾಗಿ ಕೆಲಸ ನಿರ್ವಹಿಸಿದ್ದರು. ಒಬ್ಬ ಕವಿಯಾಗಿಯೇ ಅವರು ಹೆಚ್ಚು ಜನಪ್ರಿಯರಾಗಿದ್ದಾರೆ. ಅವರ ಮೊದಲ ಕವನ ಸಂಕಲನ 'ಗೌಣ್ ದೇವತಾ' 1975ರಲ್ಲಿ ಪ್ರಕಟವಾಯಿತು. 1994ರಲ್ಲಿ ಒರಿಯಾದಿಂದ ಇಂಗ್ಲಿಷಿಗೆ ಅನುವಾದಿಸಿದ ಕವಿತಾ ಸಂಕಲನ 'ಬೋಧಿನಭ' ಕೃತಿಯನ್ನು ಪ್ರಕಟಿಸಿದ್ದಾರೆ.

## ನ್ಯೂ ಇಂಗ್ಲೆಂಡ್ ತುಳು ಕೂಟದ ಅಧ್ಯಕ್ಷೆಯಾಗಿ ಮೋಹೇರ್ ಶೆಟ್ಟಿ ಕೊಡವೂರು



ಬೊಸ್ಟನ್‌ನಲ್ಲಿರುವ ನ್ಯೂ ಇಂಗ್ಲೆಂಡ್ ಕೂಟದ 2021-23ರ ಸಾಲಿನ ನೂತನ ಅಧ್ಯಕ್ಷೆಯಾಗಿ ಶ್ರೀಮತಿ ಮೊಹೇರ್ ಶೆಟ್ಟಿ ಕೊಡವೂರು ಆಯ್ಕೆಯಾಗಿದ್ದಾರೆ.

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯೆಯಾಗಿರುವ ಮೊಹೇರ್ ಶೆಟ್ಟಿಯವರು ಸಂಘದ ಮಾಜಿ ಕೋಶಾಧಿಕಾರಿ ಕೆ.ಎಸ್.ಜಿ. ಶೆಟ್ಟಿಯವರ ಪುತ್ರಿ.

ಮೊಹೇರ್ ಶೆಟ್ಟಿಯವರಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು.

# ಕನ್ನಡದ ಓದುಗರ ಕಣ್ಮಣಿ, ಕವಿ ಸಿದ್ದಲಿಂಗಯ್ಯ



ಕನ್ನಡದ ಓದುಗರ ಕಣ್ಮಣಿ ಕವಿ ಸಿದ್ದಲಿಂಗಯ್ಯ ಅವರು ಕೊನೆಗೂ ಹೊರಟು ಹೋದರು. 1975ರಲ್ಲಿ ಅವರ ಹೊಲೆಮಾದಿಗರ ಹಾಡು ಪ್ರಕಟವಾದಾಗ ನಾನು ಬಿ.ಎ. ಓದುತ್ತಿದ್ದೆ. ಆ ಕವನ ಸಂಕಲನ ಮಾತ್ರ ಇವತ್ತಿಗೂ ಹೋರಾಟದ ಒಂದು ಸಂಕೇತವಾಗಿಯೇ ನನ್ನೊಳಗೆ ಉಳಿದುಬಿಟ್ಟದೆ. 1979ರಲ್ಲಿ ಪ್ರಕಟವಾದ ಅವರ 'ಸಾವಿರಾರು ನದಿಗಳು' ಕವನ ಸಂಕಲನದ

**'ನಿನ್ನೆ ದಿನ ನನ್ನ ಜನ ಬೆಟ್ಟದಂತೆ ಬಂದರು**
**ಕಪ್ಪುಮುಖ ಬೆಳ್ಳಿಗಡ್ಡ ಉರಿಯುತಿರುವ ಕಣ್ಣುಗಳು**
**ಹಗಲು ರಾತ್ರಿಗಳನು ಸೀಳಿ ನಿದ್ದೆಯನ್ನು ಒದ್ದರು**
**ಕಂಬಳಗಳು ಕೊರಗಿದವು ಎದ್ದೇಳುವ ರೊಚ್ಚಿಗೆ**
**ಭೂಕಂಪನವಾಯಿತು ಅವರು ಕುಣಿದ ಹುಚ್ಚಿಗೆ**
**ಇರುವೆಯಂತೆ ಹರಿದಸಾಲು ಹುಲಿಸಿಂಹದ ದನಿಗಳು**

ಧಿಕ್ಕಾರ ಧಿಕ್ಕಾರ ಅಸಮಾನತೆಗೆ' ಎಂಬ ಸಾಲುಗಳನ್ನು ನಾನು ಯಾರ್ಯಾರಿಗೆಲ್ಲ ಓದಿ ಹೇಳಿದ್ದೇನೆ ಮತ್ತು ಪಾಠ ಮಾಡಿದ್ದೇನೆ ಎಂಬುದನ್ನು ಲೆಕ್ಕ ಇಟ್ಟಿಲ್ಲ. ಜೆ.ಎನ್.ಯು. ವಿನ ಕ್ಯಾಂಟೀನ್ ಒಂದರಲ್ಲಿ ಈ ಕವಿತೆಯ ಇಂಗ್ಲೀಷ್ ಅನುವಾದವನ್ನು ಗೋಡೆಯಲ್ಲಿ ಬರೆದಿಡಲಾಗಿದೆ. ಅದನ್ನು ಕಂಡು ಕವಿಗಳು ಕಣ್ಣು ಮಿಟುಕಿಸಿ ನಕ್ಕಿದ್ದರು. ಫೋಟೋ ತೆಗೆಸಿಕೊಂಡಿದ್ದರು. ಗ್ರಾಮ ದೇವತೆಗಳು (1997) ಮತ್ತು ಊರು ಕೇರಿ ನನ್ನ ಇಷ್ಟದ ಪುಸ್ತಕಗಳು. ಕವಿಗಳು ಎರಡು ಸಲ ವಿಧಾನ ಸೌಧದ ಮೆಟ್ಟಲೇರಿದಾಗಲೂ ನಾವೆಲ್ಲ ಬೀದಿಯಲ್ಲಿ ನಿಂತು ಅವರ ಕವಿತೆಗಳನ್ನು ಹಾಡುತ್ತಿದ್ದೆವು.

ಹೋಗಿ ಬನ್ನಿ ಕವಿಗಳೇ. ಕಳೆದ 40 ವರ್ಷಗಳಿಂದ ನಿಮ್ಮೊಡನೆ ಪಟ್ಟಾಂಗ ಹೊಡೆದು ನಕ್ಕು ಹಗುರಾಗುತ್ತಿದ್ದ ನಾವೆಲ್ಲ ನಿಮ್ಮನ್ನು ಮರೆಯುವುದಿಲ್ಲ ಬಿಡಿ. ಆದರೆ ಇಷ್ಟು ಬೇಗ ನಿಮ್ಮ ಬಗ್ಗೆ ಹೀಗೆ ಬರೆಯಬೇಕಾದೀತೆಂದು ಊಹಿಸಿರಲಿಲ್ಲ.

***ಡಾ. ಪುರುಷೋತ್ತಮ ಬಿಳಿಮಲೆ***

# ಸರಳ, ಸಜ್ಜನ ಕ್ರಿಯಾಶೀಲ ನಟ ಸಂಚಾರಿ ವಿಜಯ್

ರಾಷ್ಟ್ರಪ್ರಶಸ್ತಿ ವಿಜೇತ ನಟ, ಸರಳ ಸಜ್ಜನ ಸದಾ ಚಲನಶೀಲ ಜೀವನ ಮುಖಿ ವ್ಯಕ್ತಿತ್ವದ ವಿಜಯಕುಮಾರ ಬಸವರಾಜಯ್ಯನವರು ನಮ್ಮನ್ನು ಅಗಲಿದ್ದಾರೆ. ಸಂಚಾರಿ ವಿಜಯ್ ಎಂದೇ ಹೆಸರಾದ ಇವರು ಜುಲೈ 17, 1983 ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಪಂಚನಹಳ್ಳಿಯಲ್ಲಿ ಜನಿಸಿದ್ದರು. ಬೆಂಗಳೂರಿನಲ್ಲಿ ಬೈಕು ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದರಿಂದ ಅಪೋಲೋ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ದಿನಾಂಕ 14.06.2021 ರಂದು ವಿಧಿವಶರಾದರು ಎಂಬ ಸುದ್ದಿ ತಿಳಿದು ಇಡಿ ಕನ್ನಡ ಲೋಕಕ್ಕೆಲ್ಲ ಕತ್ತಲು ಕವಿದಿತ್ತು.

ಇವರ ತಂದೆ ಬಸವರಾಜಯ್ಯನವರು ಚಿತ್ರಕಲಾವಿದರು, ಸಂಗೀತ ವಾದ್ಯಗಳನ್ನು ನುಡಿಸುತ್ತಿದ್ದರು. ತಾಯಿ ಗೌರಮ್ಮನವರು ಜಾನಪದ ಕಲಾವಿದರಾಗಿದ್ದು, ಭದ್ರಾವತಿಯ ರೇಡಿಯೋದಲ್ಲಿ ಅನೇಕ ಕಾರ್ಯಕ್ರಗಳನ್ನು ನೀಡಿದ್ದಾರೆ. ಇಂತಹ ಕುಟುಂಬದಲ್ಲಿ ಜನಿಸಿದ ಸಂಚಾರಿ ವಿಜಯ್ ರವರು ಬಾಲ್ಯದಿಂದಲೇ ರಂಗಭೂಮಿ ಹಾಗೂ ಚಿತ್ರಕಲೆಯಲ್ಲಿ ಭಾಗಿಯಾಗುತ್ತಿದ್ದರು.

ವಿಜಯ್ ಬಿಎಂಎಸ್ ಶಿಕ್ಷಣ ಸಂಸ್ಥೆಯಲ್ಲಿ ಇಂಜಿನಿಯರಿಂಗ್ ಪದವಿಯನ್ನು ಪಡೆದುಕೊಂಡು ಕೆಲಕಾಲ ಕೆಐಇಟಿ ಶಿಕ್ಷಣ ಸಂಸ್ಥೆಯ ಬೆಂಗಳೂರಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ನಂತರ ತಾನು ಭಾರತಿಯ ರಂಗಭೂಮಿಯಲ್ಲಿ, ಚಿತ್ರ ರಂಗದಲ್ಲಿ ಅಪಾರ ಸೇವೆ ಮಾಡಬೇಕು ಒಬ್ಬ ದೊಡ್ಡ ಕಲೆಗಾರನಾಗಬೇಕು ಎಂಬ ಕನಸು ಕಂಡಿದ್ದರು. ಅಲ್ಲದೆ ಹಿಂದುಸ್ಥಾನಿ ಸಂಗೀತ ಹಾಗು ಕರ್ನಾಟಕ ಸಂಗೀತ ತಜ್ಞರಾಗಿದ್ದರು. ಮಧುರ ಕಂಠದಿಂದ ಹಾಡಿ ಜನರನ್ನು ಮುಗ್ಧಗೊಳಿಸುತಿದ್ದರು. ಸಂಚಾರಿ ರಂಗ ತಂಡದಲ್ಲಿ ಸುಮಾರು ಹತ್ತು ವರ್ಷಗಳ ನಿರಂತರವಾಗಿ ದುಡಿದು ಆ ತಂಡದ ಕೀರ್ತಿಗೆ ಭಾಜನರಾಗಿದ್ದಾರೆ. ಇದರಿಂದಾಗಿ ಅವರು ಸಂಚಾರಿ ವಿಜಯ್ ಎಂದು ಖ್ಯಾತರಾದರು. ಹಲವಾರು ನಾಟಕಗಳಲ್ಲಿ ಅಭಿನಯಿಸಿ, ಎರಡು ನಾಟಕಗಳ ನಿರ್ದೇಶನ ಕೂಡಾ ಮಾಡಿ ಜನಪ್ರಿಯ ಕಲಾವಿದನಾಗಿ ಭಾರತಿಯ ರಂಗಭೂಮಿಗೆ ಮೆರುಗನ್ನು ನೀಡಿದ ಒಬ್ಬ ಆದರ್ಶ ವ್ಯಕ್ತಿಯಾಗಿದ್ದರು.

ಕನ್ನಡ ಚಿತ್ರರಂಗದ ಪ್ರತಿಭಾವಂತ ನಟ ತಮ್ಮ ಹುಟ್ಟು ಸಾವಿನ ನಡುವೆ ಕನ್ನಡ, ಹಿಂದಿ, ತಮಿಳು, ತೆಲುಗು, ಮಲಯಾಳಂಗಳ ಅನೇಕ ಚಿತ್ರಗಳಲ್ಲಿ ನಟಿಸಿ ರಾಷ್ಟ್ರಕ್ಕೆ ಮಾದರಿಯಾಗಿದ್ದಾರೆ. 2014 ರಲ್ಲಿ 'ನಾನು ಅವನಲ್ಲ, ಅವಳು' ಚಿತ್ರಕ್ಕಾಗಿ ಕನ್ನಡಕ್ಕೆ ರಾಷ್ಟ್ರಪ್ರಶಸ್ತಿ ತಂದುಕೊಟ್ಟ ದೊಡ್ಡ ಹಿರಿಮೆ ಅವರದ್ದು. ಸಂಚಾರಿಯವರು ತಮ್ಮ ಸಾವು ಬದುಕಿನ ನಡುವೆ ಇರುವ ಸುಮಾರು ಏಳು ಜನರಿಗೆ ಎರಡು ಕಣ್ಣುಗಳು, ಒಂದು ಕಿಡ್ನಿ, ಎರಡು ಸ್ವಾಶಕೋಶ, ಪಿತ್ತಕೋಶ ಹಾಗು ಹೃದಯ ಕವಾಟಗಳನ್ನು ಅಪೋಲೋ, ಎಂ.ಎಸ್. ರಾಮಯ್ಯ, ಹಾಗು ಮಿಂಟೋ



ಆಸ್ಪತ್ರೆಯಲ್ಲಿ ನೀಡಿ ಮಾನವ ಕುಲಕೋಟಿಗೆ ದಾರಿದೀಪರಾಗಿದ್ದಾರೆ. ಇಂದು 36 ವರುಷದ ಮಹಿಳೆಗೆ ನೀಡಿದ ಕಿಡ್ನಿ ಯಶಸ್ವಿಯಾಗಿ ಅವಳು ಮನಬಿಚ್ಚಿ ಮಾತಾಡಿದ ಕ್ಷಣಗಳು ಎಲ್ಲರ ಮನ ಮುಟ್ಟುವಂತಾಗಿತ್ತು. ದೃಷ್ಟಿ ಇಲ್ಲದ ಇಬ್ಬರಿಗೆ ಒಂದೊಂದು ಕಣ್ಣುಗಳು ಕೂಡಾ ಜೋಡಣೆಯಾಗಿ ಯಶಸ್ವಿ ಆಗಿ ಕಾಣದ ಲೋಕವನ್ನು ನೋಡಿ ಸಂತೋಷ ಪಡುತ್ತಿದ್ದಾರೆ. ಸಾವಿನ ನಡುವೆ ಜೀವನದ ಸಾರ್ಥಕತೆ ಪಡೆದು, ಸಾವಿನಲ್ಲು ಮೆರೆದ ಧೀಮಂತ ಸಂಚಾರಿ ವಿಜಯವರು ಮತ್ತೆ ಮತ್ತೆ ಹುಟ್ಟಿ ಬರಲಿ.

ಅವರ ಆತ್ಮಕ್ಕೆ ದೇವರು ಶಾಂತಿ ನೀಡಲಿ. ಅವರ ಕುಟುಂಬದ ಎಲ್ಲ ಸದಸ್ಯರಿಗೂ ದುಃಖವನ್ನು ಸಹಿಸುವ ಶಕ್ತಿಯನ್ನು ನೀಡಲೆಂದು ದೇವರಲ್ಲಿ ಪ್ರಾರ್ಥನೆ ಸಲ್ಲಿಸುತೇವೆ.

***ವಿ. ವಿ. ಬಿರಾದಾರ***

# ದೆಹಲಿಯ ವಾಸ್ತು: ಚಾರಿತ್ರಿಕ ನೋಟ

ಜಗತ್ತಿನ ಪ್ರಖ್ಯಾತ ನಗರಗಳಲ್ಲೊಂದಾದ ದೆಹಲಿಯು ಭಾರತ ದೇಶದ ರಾಜಧಾನಿಯಾಗಿ ಘೋಷಣೆಗೊಂಡು ಒಂದು ನೂರಾ ಹತ್ತು ವರುಷಗಳಾಯಿತು. ಈ ಸಂದರ್ಭದಲ್ಲಿ ದೆಹಲಿಯ ಸಂಕೇತದಂತಿರುವ ಅದರ ವಾಸ್ತುವನ್ನು ಸೆಂಟ್ರಲ್ ವಿಸ್ಟಾ ಕಟ್ಟುವುದರ ಮೂಲಕ ಇದೀಗ ಬದಲಾಯಿಸಲಾಗುತ್ತಿದೆ. ಹಳೆಯ ಕಟ್ಟಡಗಳ ಜಾಗದಲ್ಲಿ ಹೊಸ ಕಟ್ಟಡಗಳು ತಲೆ ಎತ್ತುತ್ತಿವೆ. ಹೀಗೆ ದೆಹಲಿ ಬದಲಾಗುತ್ತಿರುವ ಹೊತ್ತು ಅದನ್ನು ಹಿಂದಿನವರು ಕಟ್ಟಿದ ಬಗೆ ಮತ್ತು ಅದರ ಸುದೀರ್ಘ ಇತಿಹಾಸದತ್ತ ಈ ಲೇಖನದಲ್ಲಿ ಸಂಕ್ಷಿಪ್ತವಾಗಿ ವಿವರಿಸಲು ಪ್ರಯತ್ನಿಸಲಾಗಿದೆ.

ದೆಹಲಿಯು ವಿಶ್ವದ ಅತ್ಯಂತ ಪುರಾತನ ಜನವಸತಿಯ ಸ್ಥಳಗಳಲ್ಲಿ ಒಂದು. ಯಮುನಾ ನದಿಯ ದಂಡೆಗೆ ನೀಳವಾಗಿ ಉದ್ದಕ್ಕೆ ಚಾಚಿಕೊಂಡಿರುವ ಅರಾವಳಿ ಪರ್ವತ ಪ್ರದೇಶಗಳಲ್ಲಿ ಪ್ರಾಚೀನ ಜನವಸತಿಯ ನೆಲೆಗಳಿರುವುದನ್ನು ಸಂಶೋಧಕರು ಗುರುತಿಸಿದ್ದಾರೆ. ಕಡಿಮೆ ಮಳೆಬೀಳುವ ಈ ಪ್ರದೇಶದಲ್ಲಿ ಬೆಳೆಯುವ ಕುರುಚಲು ಪೊದರುಗಳು ವಲಸೆಗಾರ ಕುರುಬರಿಗೋ, ದನಗಾಹಿಗಳಿಗೋ ಅತ್ಯಂತ ಪ್ರಶಸ್ತವಾಗಿದ್ದು, ಶ್ರೀಕೃಷ್ಣನ ಓಡಾಟದ ಜಾಗವಾಗಿದ್ದುದು ಸಹಜವೇ ಸರಿ. ದೆಹಲಿಯ ಉತ್ತರ ದಿಕ್ಕಿನಲ್ಲಿ ಒಂದು ಕಾಲಕ್ಕೆ ಹರಿಯುತ್ತಿದ್ದ ಸರಸ್ವತೀ ನದಿದಂಡೆಯಲ್ಲಿ ವೇದಕಾಲೀನ ಸಮಾಜ ಕ್ರಿಯಾಶೀಲವಾಗಿತ್ತೆಂದೂ ಹೇಳಲಾಗುತ್ತಿದೆ. ಋಗ್ವೇದವು ಸರಸ್ವತಿ ನದಿಯನ್ನು 'ಅತ್ಯುತ್ತಮ ತಾಯಿ, ಅತ್ಯುತ್ತಮ ದೈವ ಮತ್ತು ಅತ್ಯುತ್ತಮ ನದಿ' ಎಂದು ಕೊಂಡಾಡುತ್ತದಲ್ಲದೆ, ಅದು ಹಾಲು ತುಪ್ಪ ಕೊಡುವ ನದಿ ಎಂದೂ ವರ್ಣಿಸುತ್ತದೆ. ವಿದ್ವಾಂಸರು ಸರಸ್ವತಿ ನದಿಯು ಕ್ರಿಪೂ 6000 ವರ್ಷಗಳಿಂದ ಕ್ರಿಪೂ 3000 ವರ್ಷಗಳವರೆಗೆ ತುಂಬಿ ಹರಿಯುತ್ತಿತ್ತೆಂದು ಹೇಳಿದ್ದಾರೆ. ಹಿಮಾಲಯದ ಗಡವಾಲ ಪ್ರದೇಶದಲ್ಲಿ ಹುಟ್ಟಿ ದಕ್ಷಿಣಕ್ಕೆ ಅದು ಹರಿಯುತ್ತಿದ್ದಾಗ ಅಲ್ಲಿ ಆ ಕಾಲಕ್ಕೆ ಥಾರ್ ಮರುಭೂಮಿಯೇ ಇರಲಿಲ್ಲ, ಬದಲು ಸರಸ್ವತಿಯ ಕೃಪೆಯಿಂದ ಹಸಿರು ಕಾಡಿತ್ತು. ಜೊತೆಗೆ ಯಮುನಾ ಮತ್ತು ಶುತಾದ್ರಿ (ಈಗಣ ಸಟ್ಲೆಜ್) ನದಿಗಳು ಸರಸ್ವತಿಯ ಎಡ–ಬಲಗಳಲ್ಲಿ ಉಪನದಿಗಳಾಗಿ ಹರಿಯುತ್ತಾ ಕೊನೆಗೆ ಸರಸ್ವತಿಯನ್ನೇ ಸೇರುತ್ತಿದ್ದುವು. ಕಾಲಾಂತರದಲ್ಲಿ ಅರಾವಳಿ ಪರ್ವತ ಶ್ರೇಣಿಗಳು ತಲೆ ಎತ್ತಿದಾಗ ಶುತಾದ್ರಿಯು ಸಿಂಧು ನದಿಯನ್ನೂ, ಯಮುನೆಯು ಗಂಗಾ ನದಿಯನ್ನೂ ಕೂಡಿಕೊಂಡವು. ಹೀಗೆ ಮುಖ್ಯವಾದ ಎರಡು ಉಪನದಿಗಳನ್ನು ಕಳಕೊಂಡು ಕೃಶಳಾದ ಸರಸ್ವತಿಯು ಕೊನೆಗೆ ಬತ್ತಿಹೋಗುವುದು ಅನಿವಾರ್ಯವಾಯಿತು. ಹಾಗೆ ಕಳೆದುಹೋದ ಸರಸ್ವತಿಯನ್ನು 'ಗುಪ್ತ ಗಾಮಿನಿ'ಎಂದು ಕರೆದು, ಅದು ತ್ರಿವೇಣಿ ಸಂಗಮದಲ್ಲಿ ಯಮುನೆ ಮತ್ತು ಗಂಗೆಯನ್ನು ಕೂಡಿಕೊಳ್ಳುತ್ತದೆ ಎಂದು ಹೇಳಲಾಯಿತು.


> **"ಪಾಂಡವರು ಖಾಂಡವವನ ದಹನ ಮಾಡಿ ಕಟ್ಟಿದ ಇಂದ್ರಪ್ರಸ್ಥವೇ ದೆಹಲಿಯೆಂದೂ ಹೇಳಲಾಗುತ್ತಿದೆ. ಈಗಿನ ಪುರಾನಾ ಕಿಲ್ಲಾ ಜಾಗದಲ್ಲಿ ಧರ್ಮರಾಯನ ಅರಮನೆ ಇತ್ತೆಂಬ ನಂಬಿಕೆ ಅಲ್ಲಿ ಓಡಾಡುವ ನಮ್ಮಲ್ಲಿ ಸಂಭ್ರಮ ಮೂಡಿಸುತ್ತದೆ."**

ಚಾರಿತ್ರಿಕವಾಗಿ, ಸಿಂಧೂ ಸಂಸ್ಕೃತಿ ಪತನಗೊಂಡ ಆನಂತರ ಜನರು ಪೂರ್ವದ ಕಡೆಗೆ ವಲಸೆ ಬಂದು ಸರಸ್ವತಿ ನದಿತೀರದ ಫಲವತ್ತಾದ ಜಾಗದಲ್ಲಿ ನೆಲೆನಿಂತರು. ಆ ಕಾಲದಲ್ಲಿ ಅಲ್ಲಿ ಅನೇಕ ನದಿಗಳು ಹರಿಯುತ್ತಿದ್ದು ಅವುಗಳನ್ನು ಆಪಗಾ, ಮಂದಾಕಿನಿ, ವಾಸು, ಕೌಶಿಕಿ, ಓಘಾವತಿ, ಮಧುಸ್ರವಾ, ವೈತರಣಿ, ದೃಶದ್ವತಿ, ರಾಕ್ಷಿ, ರತ್ನಾವಳಿ, ಅಂಶುಮತಿ, ಹಿರಣ್ವತಿ ಎಂದೆಲ್ಲಾ ಗುರುತಿಸಲಾಗಿದೆ. ವೇದಗಳು ಕಾಣಿಸಿಕೊಂಡ, ದಕ್ಷನು ಯಜ್ಞಮಾಡಿದ, ವಶಿಷ್ಟ ಜ್ಞಾನ ಸಂಪಾದನೆ ಮಾಡಿದ, ವಿಶ್ವಾಮಿತ್ರ ತಪಸ್ಸು ಮಾಡಿದ, ತ್ರಿಮೂರ್ತಿಗಳು ಮನೋಪಟಲದಲ್ಲಿ ಮೂಡಿಕೊಂಡ, ಇಂದ್ರನು ಸೋಮರಸ ಕುಡಿದ, ವೈದಿಕ ಸಂಸ್ಕೃತಿಯು ಆಕಾರ ಪಡೆದ, ಅತ್ಯಂತ ಮಹತ್ವದ ಭೂಭಾಗವು ದೆಹಲಿಗೆ ಅಂಟಿಕೊಂಡಿದೆ. ವಿವಿಧ ಬಗೆಯ ಆರ್ಥಿಕ ಚಟುವಟಿಕೆಗಳಿಗೆ ಹೆಸರಾಗಿದ್ದ ಈ ಪ್ರದೇಶವನ್ನು ಕುರು ವಂಶದವರು ಬಹಳ ಕಾಲ ಆಳಿದ್ದರು. ಕುರುಗಳಿಂದಲೇ ಹೆಸರಾದ ಕುರುಕ್ಷೇತ್ರವೂ ದೆಹಲಿಗೆ ಭಾವನಾತ್ಮಕವಾಗಿ ಅಂಟಿಕೊಂಡಿದೆ. ಕುರುಕ್ಷೇತ್ರದಲ್ಲಿ 18 ದಿನಗಳ ಕಾಲ ನಡೆದ ಮಹಾಯುದ್ಧದಲ್ಲಿ ಕೌರವರನ್ನು ಸೋಲಿಸಿದ ಪಾಂಡವರು ಬದುಕಿದ ಊರು ಇಂದ್ರಪ್ರಸ್ಥ, ಅದುವೇ ಇಂದಿನ ದೆಹಲಿ. ಮಹಾಭಾರತ ಯುದ್ಧವೇ ಕುರುಕ್ಷೇತ್ರದಲ್ಲಿ ನಡೆದ ಕೊನೆಯ ಯುದ್ಧವೇನಲ್ಲ. ಪಶ್ಚಿಮದ ಕಡೆಯಿಂದ ಭಾರತದ ಕಡೆ ಆಗಮಿಸಿದ ಎಲ್ಲರೂ ಅವರಿಗಿಂತ ಮೊದಲೇ ಇಲ್ಲಿಗೆ ಬಂದು ನೆಲೆಸಿದವರ ಪ್ರತಿಭಟನೆಯನ್ನು ಇದಿರಿಸಲು ಕುರುಕ್ಷೇತ್ರವೇ ಪ್ರಶಸ್ತ ಸ್ಥಳ. ಬಹುಶಃ ಮೂರನೇ ಪಾನಿಪತ್ ಯುದ್ಧವು ಕುರುಕ್ಷೇತ್ರದಲ್ಲಿ ನಡೆದ ಕೊನೆಯ ಮಹಾಯುದ್ಧವೆಂದು ತೋರುತ್ತದೆ.

ಪಾಂಡವರು ಖಾಂಡವವನ ದಹನ ಮಾಡಿ ಕಟ್ಟಿದ ಇಂದ್ರಪ್ರಸ್ಥವೇ ದೆಹಲಿಯೆಂದೂ ಹೇಳಲಾಗುತ್ತಿದೆ. ಈಗಿನ ಪುರಾನಾ ಕಿಲ್ಲಾ ಜಾಗದಲ್ಲಿ ಧರ್ಮರಾಯನ ಅರಮನೆ ಇತ್ತೆಂಬ ನಂಬಿಕೆ ಅಲ್ಲಿ ಓಡಾಡುವ ನಮ್ಮಲ್ಲಿ ಸಂಭ್ರಮ ಮೂಡಿಸುತ್ತದೆ. ಆದರೆ ಚಾರಿತ್ರಿಕವಾಗಿ ದೆಹಲಿಯ ಅಸ್ತಿತ್ವದ ಮೊದಲ ಉಲ್ಲೇಖ ಮಾಡಿದವನು ಟಾಲೆಮಿ. ಅಲೆಕ್ಸಾಂಡ್ರಿಯಾದಿಂದ ಆಗಮಿಸಿದ ಆತ ಹೇಳಿದ 'ದೈದಲಾ' ಎಂಬ ಪದವು ದೆಹಲಿಯೇ ಆಗಿರಬೇಕೆಂದು ಸಾಧಾರವಾಗಿ ತರ್ಕಿಸಲಾಗಿದೆ. ಕ್ರಿ.ಶ. 736 ರಲ್ಲಿದ್ದ ರಾಜಾ ತೋಮರನ ರಾಜಧಾನಿ 'ದಿಲ್ಲಿಕೆ' ಆಗಿತ್ತಂತೆ! ಪ್ರವಾಸಿಗ ಫರಿಸ್ತಾ 'ರಾಜಾದಿಲು' ಎಂಬ ಹೆಸರಿನ ಅರಸನಿದ್ದುದನ್ನು ವಿವರಿಸುತ್ತಾನೆ. ರಜಪೂತ ಅರಸ ಪೃಥ್ವಿರಾಜನು (11 ನೇ ಶತಮಾನ) ದೆಹಲಿಯನ್ನು ಆಳಿದ ಕೊನೆಯ ಹಿಂದೂ ಅರಸ. ಇಷ್ಟಿದ್ದರೂ ದೆಹಲಿ ಎಂಬ ಪದದ ನಿಜವಾದ ಅರ್ಥ ಏನೆಂದು ಯಾರಿಗೂ ತಿಳಿಯದು.

ಕ್ರಿ.ಶ. 1192 ರಲ್ಲಿ ಭಾರತಕ್ಕೆ ಬಂದ ಘೋರಿ ಮಹಮ್ಮದನ ಜೊತೆಗಿದ್ದ ಗುಲಾಮೀ ವಂಶದ ಕುತುಬುದ್ದೀನನು ದೆಹಲಿಗೆ ಹೊಸ ಆಯಾಮ ನೀಡಿದ ಸ್ವತಂತ್ರ ಬುದ್ಧಿಯ ಅರಸ. ಆತ ದೇಶವನ್ನು ದೋಚಿಕೊಂಡು ಎಲ್ಲಿಗೂ ಹೋಗಲಿಲ್ಲ. ಬದಲು ದೆಹಲಿಯಲ್ಲಿಯೇ ನೆಲೆನಿಂತು ಅದನ್ನು ಬೆಳೆಸಿದ. ಆತನ ಕಾಲದಲ್ಲಿ ತಲೆ ಎತ್ತಿ ನಿಂತ ಕುತುಬ್ ಮಿನಾರ್ ಇಂದು ದೆಹಲಿಯ ಪ್ರತಿಷ್ಠೆಯ ಸಂಕೇತಗಳಲ್ಲಿ ಒಂದು. ಕುತುಬುದ್ದೀನ್‌ನ ತರುವಾಯ ದೆಹಲಿಯನ್ನಾಳಿದ ಇಲ್ತ್‌ಮುಷ್‌ನ ಸೌಂದರ್ಯ ಪ್ರಜ್ಞೆಯನ್ನು ದೆಹಲಿ ಇಂದಿನವರೆಗೆ ಬೇರೆ ಬೇರೆ ರೂಪಗಳಲ್ಲಿ ಉಳಿಸಿಕೊಂಡು ಬಂದಿದೆ. ದೆಹಲಿಯ ಆಳ್ವಿಕೆಗೆ ಮಾತೃತ್ವದ ಸ್ಪರ್ಶ ನೀಡಿದ ರಜಿಯಾ ಸುಲ್ತಾನಳ ಪರಂಪರೆ ಬೆಲೆಬಾಳುವಂಥದ್ದು. ಗುಲಾಮಿ ವಂಶಾಡಳಿತವನ್ನು ಕೊನೆಗೊಳಿಸಿ ಅಧಿಕಾರ ಹಿಡಿದ ಖಿಲ್ಜಿ ವಂಶದ ಅಲ್ಲಾವುದ್ದೀನನು ದೆಹಲಿಗೆ ಮಾರುಕಟ್ಟೆ ಮಂತ್ರ ಹೇಳಿಕೊಟ್ಟ ಮಹನೀಯ. ಆತನ ಕಾಲದಲ್ಲಿ ದೆಹಲಿಗೆ ಆಗಮಿಸಿದ ಟರ್ಕಿಶ್ ಜನರಿಂದಾಗಿ ಒಂದೇ ಸಮನೆ ಏರತೊಡಗಿದ್ದ ಬೆಲೆಗಳನ್ನು ನಿಯಂತ್ರಿಸಲು ಆತ ಹೆಣಗಾಡಿದ್ದು ಕುತೂಹಲಕರವಾಗಿದೆ. ಅಲೈ ದರ್ವಾಜಾ, ಹೌಸ್ ಖಾಸ್ ಕೆರೆಗಳನ್ನು ನಿರ್ಮಿಸಿದ ಆತ ದೆಹಲಿಯ ಜನರಿಗೆ ಇಂದಿಗೂ ಸುಂದರ ನೆನಪು. ಖಿಲ್ಜಿ ವಂಶ ಕೊನೆಗೊಂಡಾನಂತರ ದೆಹಲಿ ಆಡಳಿತ ಹಿಡಿದ ತುಘಲಕ್ ವಂಶಸ್ಥರು ಬೃಹತ್ ಕೋಟೆಗಳನ್ನು ಕಟ್ಟಿದರು, ದೆಹಲಿಯನ್ನು ದೇವಗಿರಿಗೆ ವರ್ಗಾಯಿಸಲು ಪ್ರಯತ್ನಿಸಿದರು. ಲೋಧಿ ಅರಸರ ಸಮಾಧಿ ಸ್ಥಳ ಇಂದು ಪ್ರೇಮಿಗಳ ಸಂಧಿಸ್ಥಳವಾಗಿದೆ.

1500ರ ಸುಮಾರಿಗೆ ದೆಹಲಿಯನ್ನಾಳಲು ಆರಂಭಿಸಿದ ಮೊಗಲರ ನೆನಪುಗಳು ಇಂದಿನ ದೆಹಲಿಯ ತುಂಬ ವ್ಯಾಪಕವಾಗಿ ಹರಡಿಕೊಂಡಿದೆ. ಹುಮಾಯೂನ, ಅಕ್ಬರ,



**ಲೋಧಿ ಗಾರ್ಡನ್‌ನಲ್ಲಿರುವ ಬಾರ ಗುಂಬಜ್‌ನ ನಯನ ಮನೋಹರ ದೃಶ್ಯ**

ಜಹಾಂಗೀರ, ಷಹಾಜಹಾನ, ದಾರಾಶಿಖೋ, ಔರಂಗಜೇಬ ಮೊದಲಾದವರು ದೆಹಲಿಯ ಮುಖ್ಯ ರಸ್ತೆಗಳ ಹೆಸರಾಗಿಯಾದರೂ ಹೊಸ ತಲೆಮಾರಿಗೆ ತಿಳಿಯುತ್ತಿದೆ. ಯಮುನೆಯ ದಡದಲ್ಲಿ ತಲೆ ಎತ್ತಿ ನಿಂತಿರುವ ಕೆಂಪುಕೋಟೆಯಿಂದ ಇಂದು ಸ್ವತಂತ್ರ ಭಾರತದ ಬಾವುಟ ಹಾರಾಡುತ್ತಿದೆ. ಮೊಗಲರ ಕೊನೆ ಅರಸನಾದ ಬಹದೂರ್ ಶಾ ಜಫರ್‌ನಿಗೆ ಊಟ ತಯಾರು ಮಾಡಿಕೊಡುತ್ತಿದ್ದ ಕರೀಂ ಸಾಬರ ಚಿಕನ್ ಶಾಪ್ ಈಗಲೂ ಜಾಮಾ ಮಸೀದಿ ಬಳಿ ಕಾರ್ಯನಿರತವಾಗಿದೆ. ಮೊಗಲರ ಕೊನೆಯ ಅರಸನನ್ನು ಸುಲಭವಾಗಿ ಸೋಲಿಸುವುದರೊಂದಿಗೆ ದೆಹಲಿಗೆ ಪ್ರವೇಶ ಪಡೆದ ಬ್ರಿಟಿಷರು ಆರಂಭಿಕ ಹಂತಲ್ಲಿ ಕಲ್ಕತ್ತವನ್ನೇ ರಾಜಧಾನಿ ಮಾಡಿಕೊಂಡಿದ್ದರು. ಆದರೆ 1900ರ ಬಳಿಕ ಕಾಣಿಸಿಕೊಂಡ ಬಂಗಾಳ ಪ್ರಕ್ಷುಬ್ಧತೆ, ಕಲ್ಕತ್ತದ ಪ್ರತಿಕೂಲ ಹವೆಗಳಿಂದ ಬೇಸತ್ತ ಬ್ರಿಟಿಷರು ಕಲ್ಕತ್ತ ತೊರೆದು ದೆಹಲಿಗೆ ರಾಜಧಾನಿಯನ್ನು ವರ್ಗಾಯಿಸಲು ಯೋಚಿಸಿದರು. 1906 ರಲ್ಲಿ ಭಾರತಕ್ಕೆ ಆಗಮಿಸಿದ ಬ್ರಿಟಿಷ್ ಚಕ್ರವರ್ತಿ ಐದನೇ ಜಾರ್ಜ್ ಈ ಕುರಿತು ಆದೇಶ ಹೊರಡಿಸಿದ ಆನಂತರ 'ರಾಜಧಾನಿ ನವದೆಹಲಿ'ಯನ್ನು ಕಟ್ಟಲು ಆರಂಭಿಸಲಾಯಿತು.

ದೆಹಲಿಯನ್ನು ಬ್ರಿಟಿಷ್ ಸಾಮ್ರಾಜ್ಯದ 'ಇಂಡಿಯಾ ಕ್ಯಾಪಿಟಲ್' ಆಗಿಸುವ ಹೊಣೆ ಹೊತ್ತವನು ಲ್ಯುಟಿನ್ಸ್ ಎಂಬ ಅಸಾಧಾರಣ ಪ್ರತಿಭೆಯ ವಾಸ್ತುಶಿಲ್ಪಿ. ಆ ಕಾಲದ ಜಗತ್ತಿನ ಪ್ರಮುಖ ನಗರಗಳಾದ ಪ್ಯಾರಿಸ್, ಬರ್ಲಿನ್, ಲಂಡನ್, ಸಿಡ್ನಿ ಮತ್ತು ವಾಷಿಂಗ್ಟನ್ ಡಿ ಸಿ. ನಗರಗಳ ಬಗ್ಗೆ ಆಳವಾದ ತಿಳುವಳಿಕೆ ಹೊಂದಿದ್ದ ಲುಟಿನ್ಸ್ ವೈಯಕ್ತಿಕವಾಗಿ ಬಹಳ ದುರಹಂಕಾರಿಯಾಗಿದ್ದ. ಆತನು ಕಟ್ಟಲಿದ್ದ ನವದೆಹಲಿಯ ಬಗ್ಗೆ ಬ್ರಿಟಿಷ್ ಸಂಸತ್ತಿನಲ್ಲಿ ಸುದೀರ್ಘವಾಗಿ ಚರ್ಚೆಯಾಗಿತ್ತು. ಪ್ರತಿಭೆಗೆ ಮನ್ನಣೆ ನೀಡುವ ಬ್ರಿಟಿಷ್ ಸಂಸತ್ತು ಲ್ಯುಟಿನ್ಸ್‌ನ್ನು ಕೇಳಿಕೊಂಡಾಗ "ನೀನು ಕಟ್ಟಲಿರುವ ಆಧುನಿಕ ದೆಹಲಿಯ ವಾಸ್ತುಶಿಲ್ಪಕ್ಕೆ ಭಾರತದ ಪಾರಂಪರಿಕ ವಾಸ್ತುಶಿಲ್ಪದ ಸ್ಪರ್ಶ ಇರಲಿ" ಎಂಬ ಸೂಚನೆ ನೀಡಿದ್ದರು. ಸಿಟ್ಟಿಗೆದ್ದ ಲ್ಯುಟಿನ್ಸ್‌ನು ಚಕ್ರವರ್ತಿ ಜಾರ್ಜನ ಚಿತ್ರ ಬರೆದು ಅವನ ಮುಖಕ್ಕೆ ಷಹಜಹಾನನ ಗಡ್ಡ ಅಂಟಿಸಿದ ಮತ್ತು ಮಹಾರಾಣಿಯ ಚಿತ್ರ ಬರೆದು ಅದಕ್ಕೆ ಬುರುಖಾ ಹಾಕಿ "ಬ್ರಿಟಿಷರ ಆಧುನಿಕತೆಗೆ ಭಾರತದ ಪರಂಪರೆಯನ್ನು ಜೋಡಿಸುವುದೆಂದರೆ ಹೀಗೆ" ಅಂತ ಹೇಳಿ ಬ್ರಿಟಿಷ್ ಪತ್ರಿಕೆಗಳಲ್ಲಿ ಅವೆಳ ಚಿತ್ರಗಳನ್ನು ಪ್ರಕಟಿಸಿಬಿಟ್ಟ. ಇಷ್ಟಿದ್ದರೂ ಆತ ಕೊನೆಗೆ ಮೊಗಲ್ ವಾಸ್ತುಶಿಲ್ಪದ ಕೆಲವು ಅತ್ಯುತ್ತಮ ಭಾಗಗಳನ್ನು ಅಳವಡಿಸಿಕೊಂಡು, ಅರಾವಳಿ ಪರ್ವತ ಶ್ರೇಣಿಯ ಭಾಗವಾದ ರೈಸ್ನಾ ದಿಬ್ಬದ ಮೇಲೆ ಅದ್ಭುತವಾದ 'ವೈಸರಾಯ್ ಬಂಗಲೆ'ಯನ್ನು ಅದರ ಎಡಬಲಗಳಲ್ಲಿ ಕಚೇರಿಗಳನ್ನು ಕಟ್ಟಿದ. ಇದಕ್ಕೆ ಸುಮಾರು 35 ವರ್ಷಗಳ ಕಾಲ ಸಾವಿರಾರು ಜನ ದುಡಿದರು. ಸ್ವಾತಂತ್ರ್ಯಾನಂತರ ಈ 'ಬಂಗಲೆ'ಯನ್ನು 'ರಾಷ್ಟ್ರಪತಿ ಭವನ'ವನ್ನಾಗಿ ಮಾರ್ಪಡಿಸಲಾಯಿತು. ಅದರ ಎಡಬಲದ ಕಚೇರಿಗಳಲ್ಲಿ ಇಂದು ಪ್ರಧಾನಮಂತ್ರಿಗಳ ಮತ್ತು ಇತರ ಮಂತ್ರಿಗಳ ಕಚೇರಿಗಳು ಕಾರ್ಯನಿರ್ವಹಿಸುತ್ತಿವೆ.

ಲ್ಯುಟಿನ್ಸ್ ವೈಸರಾಯ್‌ಗೆ ಕಟ್ಟಿದ ಅರಮನೆಯಂಥ ಬಂಗಲೆಗೆ ಹೈದರಾಬಾದಿನ ನಿಜಾಮ, ಬರೋಡದ ಮತ್ತು ಜೈಪುರದ ಅರಸರು ಉದಾರವಾಗಿ ದೇಣಿಗೆ ನೀಡಿದ್ದರು. ಅದಕ್ಕೆ ಪ್ರತಿಯಾಗಿ ಆ ಅರಸರು ಇಂದಿನ 'ಇಂಡಿಯಾ ಗೇಟ್'ನ ಸುತ್ತ ಸ್ವಲ್ಪ ಜಾಗ ಪಡಕೊಂಡರು. ಲ್ಯುಟಿನ್ಸ್ ಅವರಿಗೂ ಬಂಗಲೆ ಕಟ್ಟಿಸಿದ. ನಮ್ಮ ಮೈಸೂರಿನ ಅರಸರಿಗೆ ದೇಣಿಗೆ ನೀಡಲಾಗಿಲ್ಲ. ಕಾರಣ, ಆಯಕಟ್ಟಿನ ಜಾಗದಲ್ಲಿ ಮೈಸೂರು ಹೌಸ್ ಬರಲಿಲ್ಲ. ಇಂದು ದೆಹಲಿಯ ಸುತ್ತಮುತ್ತ ನೊಯ್ಡಾ, ಫರಿದಾಬಾದ್, ಗುರ್ಗಾಂವ್‌ಗಳು ಇತಿಹಾಸದ ಭಾರವಿಲ್ಲದೆ ಅತ್ಯಾಧುನಿಕವಾಗಿ ಬೆಳೆದುನಿಂತಿವೆ. ದೆಹಲಿ ಮಾತ್ರ ಒಂದೆಡೆಯಲ್ಲಿ ಹಜರತ್ ನಿಜಾಮುದ್ದೀನ್‌ನಲ್ಲಿನ ಮಧ್ಯಕಾಲೀನ ಯುಗದ ಕವಾಲಿಗಳಿಗೆ ಇನ್ನೂ ಕಿವಿಗೊಡುತ್ತಿದೆ, ಆದರೆ ಅಲ್ಲಿಯೇ ನಿಲ್ಲದೆ ಇನ್ನೊಂದೆಡೆ ಅತ್ಯಾಧುನಿಕವಾದ ಮೆಟ್ರೋ ರೈಲನ್ನು ಸಾಧ್ಯಮಾಡಿದೆ. ಜೊತೆಗೆ ಮಹಾಭಾರತದ ಕುರುಕ್ಷೇತ್ರ ಯುದ್ಧದಿಂದ ಆರಂಭವಾದ ದೆಹಲಿಯ ರಕ್ತ-ಸಿಕ್ತ ಇತಿಹಾಸ ಆಗಾಗ ಮರುಕಳಿಸುತ್ತಾ ಬಂದಿರುವುದೂ ನಿಜ.

ಚರಿತ್ರೆಯ ಗಾಲಿಗಳು ಸುತ್ತುತ್ತಲೇ ಇರುತ್ತವೆ. ದೆಹಲಿಯ ಇತಿಹಾಸವೂ ಬದಲಾಗುತ್ತಲೇ ಇದೆ.

***ಡಾ. ಪುರುಷೋತ್ತಮ ಬಿಳಿಮಲೆ***

# ದೆಹಲಿ ಕನ್ನಡಿಗರ ಪರಿಸರ ಗಾಯನ ಯೂಟ್ಯೂಬ್‌ನಲ್ಲಿ

ದೆಹಲಿಯ ಕನ್ನಡಿಗರು ಈ ಕೊರೊನಾದ ಎಲ್ಲ ಸಂಕಷ್ಟಗಳ ನಡುವೆಯೂ ತಮ್ಮ ಸೃಜನಶೀಲ ಅಭಿವ್ಯಕ್ತಿಗಳ ಪರಿಯನ್ನು ಕಾಲಕಾಲಕ್ಕೂ ಹಲವಾರು ಬಗೆಗಳಲ್ಲಿ ಪ್ರಕಟಪಡಿಸುತ್ತ ಬಂದಿದ್ದಾರೆ. ದೆಹಲಿ ಕರ್ನಾಟಕ ಸಂಘದ ಹಲವಾರು ಕಾರ್ಯಕ್ರಮಗಳಲ್ಲಿ ಇವನ್ನು ನಾವೆಲ್ಲ ಕಂಡಿದ್ದೇವೆ. ಆದರೆ, ಕಳೆದ ಹಲವಾರು ತಿಂಗಳುಗಳ ಲಾಕ್‌ಡೌನ್ ಸಂದರ್ಭದಲ್ಲಿ ಜಾಲತಾಣದ ಎಲ್ಲ ಸಾಧ್ಯತೆಗಳನ್ನು ಉಪಯೋಗಿಸಿಕೊಂಡು ನಮ್ಮ ಗೆಳೆಯರು ಕಲಾಪ್ರೌಢಿಮೆಯನ್ನು ಮೆರೆದಿದ್ದಾರೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಶ್ವಸಂಸ್ಥೆ ನಿಗದಿಪಡಿಸಿದಂತೆ ಆಚರಿಸಲ್ಪಡುವ ಜೂನ್ 5 ರ ಪರಿಸರ ದಿನಾಚರಣೆಯನ್ನು ನಮ್ಮ ಆತ್ಮೀಯ ದೆಹಲಿ ಕಲಾವಿದರು ತಾವೇ ರಚಿಸಿದ ಹಾಡಿಗೆ ರಾಗ ಸಂಯೋಜನೆ ಮಾಡುವ ಮೂಲಕ ಮತ್ತು ಅದನ್ನು ಜಾಲತಾಣದ ಯೂಟ್ಯೂಬ್‌ನಲ್ಲಿ ಹಾಕಿ ಪ್ರಸಾರ ಮಾಡುವ ಮೂಲಕ ನೂರಾರು ದೆಹಲಿ ಕನ್ನಡಿಗರನ್ನು ತಲುಪಿದ್ದು ಒಂದು ಅರ್ಥಪೂರ್ಣ ಪ್ರಯತ್ನವಾಗಿದೆ.

ನಮ್ಮೆಲ್ಲರ ನೆಚ್ಚಿನ ಹರಿಪ್ರಿಯರವರು ಬರೆದ 'ಪರಿಸರ ಪರಿಸರ ಪರಿಸರ' ಎಂಬ ಕವನ ಪರಿಸರ ದಿನಕ್ಕೆ ಕನ್ನಡಿ ಹಿಡಿದಂತಿದೆ. ಈ ಕವನದಲ್ಲಿ ಪರಿಸರದ ಪ್ರಾಮುಖ್ಯತೆಯನ್ನು 'ಸೃಷ್ಟಿಯ ಮೂಲ' ಎಂದು ವರ್ಣಿಸುತ್ತ 'ಬಿದ್ದರೆ ಮಳೆ ! ಬೆಳೆಯುವುದು ಬೆಳೆ! ಸಕಲ ಜೀವರಾಶಿಗೆ ಅದರಿಂದಲೇ ಕಳೆ' ಎನ್ನುತ್ತಾರೆ. ಪರಿಸರವು 'ಉಸಿರಿನ ಭಂಡಾರ'ವೆನ್ನುತ್ತ 'ಎಲ್ಲದಕ್ಕೂ ಪರಿಹಾರ ಈ ಪರಿಸರ'ವೆಂಬುದನ್ನು ಅವರು ಮಾರ್ಮಿಕವಾಗಿ ಹೇಳುತ್ತಾರೆ. ಈ ಪುಟ್ಟ ಕವನವನ್ನು ಬರೆದದ್ದಲ್ಲದೆ ಅದನ್ನು ತಮ್ಮ ಅದ್ಭುತವಾದ ಹಾಡಿನ ಮೋಡಿ ಮಾಡುವ ಎಸ್. ಕುಮಾರರವರ ಸಂಯೋಜನೆಯಲ್ಲಿ ಮತ್ತು ಹಾಡಿನ ಜಾಡಿನಲ್ಲಿ ಅದನ್ನು ಸುಂದರವಾಗಿ ವೀಡಿಯೋದ ಮೂಲಕ ಪ್ರಸ್ತುತಪಡಿಸಿದ್ದಾರೆ. ನಾಟಕ ನಿರ್ದೇಶಕರು ಮತ್ತು ಸ್ವತಃ ಕಲಾವಿದರಾಗಿರುವ ನಮ್ಮೆಲ್ಲರ ಆತ್ಮೀಯರಾದ ತಾವರೆಕೆರೆ ಮೈಲಾರಪ್ಪನವರು ಅದಕ್ಕೆ ತಮ್ಮ ತಮಟೆಯ ಮಿಡಿತವನ್ನು ಸೇರಿಸಿದ್ದು ಈ ಹಾಡಿನ ವಿಶೇಷ.

ಮೊದಲ ಒಂದು ನಿಮಿಷಗಳ ಕಾಲ ಪರಿಸರದ ಬಗ್ಗೆ ಮತ್ತು ಈ ಹಾಡಿನ ಸಾಂದರ್ಭಿಕತೆಯ ಬಗ್ಗೆ ಎರಡು ಆಶಯದ ಮಾತುಗಳನ್ನು ಆಡುವ ಭಾಗ್ಯ ನನ್ನದಾಗಿತ್ತು. ದೆಹಲಿ ಕನ್ನಡ ಶಾಲೆಯ ಆವರಣದಲ್ಲಿ ನಮ್ಮ ಇನ್ನೊಂದು ಕಲಾವಿದರ ಬಳಗ ಪರಿಸರ ದಿನದ ಕುರಿತಾಗಿ ಹಾಡೊಂದನ್ನು (ಶಿವಮಲ್ಲು ವಿರಚಿತ 'ಪರಿಸರವೆಂದರೆ ರೆಡಿಮೆಡಲ್ಲ, ಅದು ದೇವರ ಸೃಷ್ಟಿಯ ತಾಣವಿದು' ಎಂಬ ಕವನವನ್ನು) ತಮ್ಮ ನರ್ತನದೊಂದಿಗೆ ವೀಡಿಯೊಕರಿಸಿ ಅದನ್ನು ಯೂಟ್ಯೂಬಿಗೆ ಹಾಕಿದ್ದು ನಮಗೆಲ್ಲ ಹೆಮ್ಮೆಯ ಸಂಗತಿ. ಈ ವೀಡಿಯೋಕ್ಕೆ ಶಾಲೆಯ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆಯವರು ಅರ್ಥಪೂರ್ಣವಾದ ಮುನ್ನುಡಿಯ ಮಾತುಗಳನ್ನು ಆಡಿದ್ದನ್ನು ನಮೂದಿಸಬೇಕು.

ಈ ಹಾಡನ್ನು ನರ್ತನರೂಪದಲ್ಲಿ ಅದ್ಭುತವಾಗಿ ಪ್ರಸ್ತುತಪಡಿಸಿದವರು ನೆಚ್ಚಿನ ಗಾಯಕರಾದ ಎಸ್. ಗಿರೀಶ ಮತ್ತು ಅವರೊಂದಿಗೆ ಜೊತೆಯಾದವರು ಎಸ್. ಕುಮಾರ, ಟಿ.ಎಂ. ಮೈಲಾರಪ್ಪ, ಶಶಿಕಾಂತ ಪಾಟೀಲ, ಕೃಷ್ಣರಾಜ್ ಕೆ.ಎನ್. ಮತ್ತು ಹರಿಪ್ರಿಯರವರು. ಇದನ್ನು ಎಲ್ಲ ಕನ್ನಡಿಗರು ನೋಡಿ ಆನಂದಿಸಲಿ ಮತ್ತು ಈ ಕಲಾವಿದರ ಬಳಗ ಇನ್ನೂ ಸಕ್ರಿಯವಾಗಲಿ ಎಂದು ಹಾರೈಸುತ್ತೇನೆ.

ವೀಕ್ಷಣೆಗಾಗಿ ಈ ಲಿಂಕನ್ನು ಸಂಪರ್ಕಿಸಬಹುದು.

https://youtu.be/XoG5377kHpI

https://youtu.be/f_BZ00HM-cs

***ಡಾ. ವೆಂಕಟಾಚಲ ಹೆಗಡೆ***

# ಕೊರೊನಾ ಕಾಲದಲ್ಲಿ ಮಿಡಿದ ಕನ್ನಡ ಮನಸ್ಸುಗಳು

ಶತಮಾನಗಳ ಅಂತರದಲ್ಲಿ ಬಂದಂತಹ ಕೊರೊನಾ ಎಂಬ ಮಹಾಮಾರಿಯ ಅಲೆಗೆ ಸಂಪೂರ್ಣ ವಿಶ್ವವೇ ನಲುಗಿತ್ತು. ಅಭಿವೃದ್ಧಿಯ ಉತ್ತುಂಗಕ್ಕೆ ಏರಿರುವ ರಾಷ್ಟ್ರಗಳು ಅಸಹಾಯಕರಾಗಿರುವ ಸಂದರ್ಭಗಳು ಕಂಡು ಬರುತ್ತಿತ್ತು.

ಕಣ್ಣಿಗೆ ಕಾಣದ ಭಗವಂತನ ಲೀಲೆ......... ಸಂಕಷ್ಟಗಳು ಬಂದರೂ, ನಿವಾರಣಾ ವ್ಯವಸ್ಥೆಯೂ ಇರುತ್ತದೆ.

ಭಾರತ, ಬಹು ಅಲ್ಪ ಸಮಯದಲ್ಲಿ ಎರಡು ಲಸಿಕೆಯನ್ನು ಉತ್ಪಾದಿಸಲು ಮುನ್ನುಗ್ಗಿತು. ಅಲ್ಲದೇ  ವಿಶ್ವದ ಹಲವು ರಾಷ್ಟ್ರಗಳಿಗೆ ಲಸಿಕೆಯನ್ನು ಸರಬರಾಜು ಕೂಡ ಮಾಡಿರುವುದು ಉಲ್ಲೇಖನೀಯ ಹಾಗೂ ಮಾನವೀಯತೆಗೆ ಎತ್ತಿ ಹಿಡಿದ ಕನ್ನಡಿ.

ಈ ಮಹಾಮಾರಿಯ ಎರಡನೇ ಅಲೆ, ಮನುಕುಲಕ್ಕೆ ನಂಬಲಸಾಧ್ಯ ಅನುಭವ ತಂದುಕೊಟ್ಟಿರುವುದು ವಿಶೇಷ.

ದೆಹಲಿಯ ಕನ್ನಡಿಗರ ನಡುವೆ, ಇವರಿಗೆ ಕೊರೊನಾ, ಅವರಿಗೆ ಕೊರೊನಾ ಹೀಗೆ ವಿಷಯಗಳು ಪ್ರಸಾರವಾಗತೊಡಗಿದವು.

ಗಂಡ – ಹೆಂಡತಿ ಹಾಗೂ ಮಕ್ಕಳು...

ಸಂಕಷ್ಟ, ಸಂಧಿಗ್ದ ಪರಿಸ್ಥಿತಿ.....

ದೆಹಲಿಯಲ್ಲಿ ಲಾಕ್‌ಡೌನ್.....

ಇದೇ ಸಂದರ್ಭದಲ್ಲಿ ನಮ್ಮ ಮನಸ್ಸಿಗೆ ಹೊಳೆದಂತೆ, ಏಪ್ರಿಲ್ 22ರಂದು, ಸಾಮಾಜಿಕ ಜಾಲತಾಣದ ಮೂಲಕ ದೆಹಲಿ ಕನ್ನಡಿಗರಿಗೆ ಸ್ವಯಂ ಸೇವಾ ಸಮೂಹದ (Volunteers) ಕರೆಕೊಟ್ಟೆವು. ತಕ್ಷಣ ಹಲವು ಕನ್ನಡಿಗರು ಸ್ವಯಂ ಪ್ರೇರಿತರಾಗಿ ತಮ್ಮ ಕೈ ಗೂಡಿಸಿದರು. Delhi-CTF ಎಂಬ ನಾಮಾಂಕಿತದೊಡನೆ, ನಿಃಶುಲ್ಕ ಹಾಗೂ ನಿಸ್ವಾರ್ಥ ಸೇವಾ ಕಾರ್ಯ ಪ್ರಾರಂಭವಾಯಿತು.

ಹಲವು ವೈದ್ಯರ ಸಹಕಾರ, ಕೇಶವ ಕ್ಲಬ್‌ನವರ ಹಾಗೂ ಉಡುಪಿ ಎಂಟರ್ ಪ್ರೈಸಸ್ ರವರ ಊಟದ ವ್ಯವಸ್ಥೆ, ಔಷಧಿಗಳ ಸರಬರಾಜು, ಆಸ್ಪತ್ರೆಗೆ ದಾಖಲಾತಿ, ಆಕ್ಸಿಜನ್ ವ್ಯವಸ್ಥೆ... ಸ್ವಯಂ ಸೇವಕರಿಂದ ಶವ ಸಂಸ್ಕಾರದ ನೆರವು, ಹೀಗೆ ಬೆಳಗ್ಗೆ 5 ಘಂಟೆಯಿಂದ ಅಪರ ರಾತ್ರಿ ಆದರೂ ಕೆಲಸ, ದೂರವಾಣಿ ಕರೆಗಳು ಮುಗಿಯುತ್ತಿರಲಿಲ್ಲ.

ಈತನ್ಮಧ್ಯೆ, ಹಲವು ಆತ್ಮೀಯರು ಇಹಲೋಕ ತ್ಯಜಿಸಿರುವುದು ವಿಷಾದನೀಯ. 5–6 ವಾರಗಳಲ್ಲಿ ಮಹಾಮಾರಿ ಅಲೆಯ ಪ್ರಭಾವ ತಗ್ಗಲಾರಂಭಿಸಿತು.

ಜೂನ್ 20ರಂದು ಅಂತರ್ಜಾಲದ ಮೂಲಕ ದೆಹಲಿ ಕನ್ನಡಿಗರಿಗಾಗಿ ವೈದ್ಯರೊಡನೆ ಅನೌಪಚಾರಿಕ ಸಂವಾದ ಕಾರ್ಯಕ್ರಮ ಆಯೋಜಿಸಿದೆವು. ಹಲವು ವೈದ್ಯರು ಉಲ್ಲಾಸದಿಂದ ಭಾಗವಹಿಸಿ, ನಮ್ಮ ದೆಹಲಿ ಕನ್ನಡ ಬಂಧುಗಳಿಗೆ ಒಳ್ಳೆಯ ಸಲಹೆ ಸೂಚನೆಗಳನ್ನು ಕೊಟ್ಟಿರುವುದು ಅವಿಸ್ಮರಣೀಯ.

ಧನ್ಯವಾದಗಳ ಸ್ವೀಕಾರ ಹಾಗೂ ವೈಯಕ್ತಿಕ ಪ್ರಚಾರ ನಿಷೇಧವಾಗಿದ್ದದ್ದು Delhi-CTFನ ವಿಶೇಷತೆ...

ಮೂರನೇ ಅಲೆಯ ಬಗ್ಗೆ ಕೇಳಿ ಬರುತ್ತಿದೆ. ನಮ್ಮ ಸಮೂಹ 3ನೆ ಅಲೆಯ ಸಂಧರ್ಭದಲ್ಲಿ ಸೇವಾ ಕೈಂಕರ್ಯರಾಗಲು ಸನ್ನದ್ಧರಾಗುತ್ತಿದ್ದು, ಸೇವಾ ಮನೋಭಾವ ಉಳ್ಳ ಆತ್ಮೀಯ ಕನ್ನಡ ಬಂಧುಗಳು ಸ್ವಯಂ ಸೇವಾ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಮುಕ್ತ ಅವಕಾಶ.

***ಟಿ.ಎಂ. ಮೈಲಾರಪ್ಪ***

## ವಾಸ್ತವ್ಯ

ನಾನೇನು ಮಾಡುವುನೆ ತಾಯೇ ನಿನಗೆ
ನಿನ್ನ ಸ್ಮರಣೆಯೇ ಎನಗೆ ಶ್ರೀರಕ್ಷೆ ತಾಯೇ
ನೀ ನಡೆದು ಅದಕಾಗೆ ಕೈ ಹಿಡಿದು ಕಾಯೇ
ನಮಿಸು ಬಂದಿರುವೆ; ಶಿರವ ಬಾಗಿರುವೆ ತಾಯೇ
ಯಾವುದೋ ಭಾವವಿದು
ಮನದೊಳಗೆ ಮೂಡುತಿದೆ
ಕಾಡುತಿದೆ ಕೆಣಕುತಿದೆ
ಬಳಲುತಿದೆ ತೊಳಲುತಿದೆ
ಸುಯ್ಯೆಂದು ಬಿಸು ಸುಯ್ದು
ನಿಂತು ಮನದೊಳಗೆ
ಮಾಡುತಿದೆ ಮೋಜು
ಎಲ್ಲಾ ಗೋಜು ಗೋಜು
ಕವಿದು ಮುಸುಕಿದೆ
ನೈರಾಶ್ಯ ಛಾಯೆ
ಜೀವನದ ಬಂಡಿಯಿದು
ಒಂಟಿಗಾಲಿಯಲೆಂತು
ಗುರಿ ಸೇರಬಹುದು?
ಅದಕಾಗಿ ಪಥಿಕರಾದ
ನಮ್ಮನ್ನು ಕರೆದುಕೋ ತಾಯೆ
ಇಹದ ನೋವನು ನುಂಗಿ ಜಗದ
ಕ್ಷೋಭೆಯ ಮರೆತು ಇಂಪಾಗಿ
ಮೆಲುದನಿಯಲಿ ಹೊಸ ಹಾಡ ಹಾಡೋಣ
ಮನಕೆ ಸಾಂತ್ವನವೀವ ನೆಮ್ಮದಿಯ ಕ್ಷಣಕಾಗಿ
ಬಣ್ಣ ಬಣ್ಣದ ಲೋಕ
ಸೃಜಿಸಿಹರು ಇಲ್ಲಿ
ವಾಸ್ತವದ ಜೀವನಕೆ
ಮೆರಗಿನ ಲೇಪನ ತೀಡಿ

***ಡಾ. ಅಹಲ್ಯಾ ಚಿಂತಾಮಣಿ***

## ಪರದೆ

ಈ ಪರದೆ
ಏಕೆ ನಮ್ಮೊಳಗೆ
ಇರುವುದನ್ನು ಇರುವಂತೆ
ಹೊರಳಸುತ್ತಿಲ್ಲ ನಾಲಗೆ
ಆರತಿ ಎತ್ತುವ
ಅನಿವಾರ್ಯತೆ ಇದೆಯೇ
ಬೆವರಿನ ಕೈಗಳಿಗೆ?
ಕಂಡಾಗ ನಗುತ
ಮರೆಯಲ್ಲಿ ಕಿರುಚಾಡುತ
ನಮ್ಮತನಗಳಿಗೆ ಸೊಪ್ಪು ಹಾಕುತ
ಯಾರದೋ ಗಂಟುಮೂಟೆಯ ಹೊತ್ತು
ತಲೆ ಮೇಲೆ ಭಾರವೆಂದು
ಪರಿಪರಿ ನರಳಾಡುತ
ದಾಸ್ಯದೊಳಗೆ ನಿಂದು ಬೆಂದು
ಪ್ರಜ್ಞೆಯ ಚುಚ್ಚುವ
ಹುಸಿ ಭಾವಗಳ ನಡುವೆ
ಉರಿವ ದೀಪವ ಆರಿಸಿ
ಗುಹೆಯೊಳಗೆ ತಡಕಾಡುತ
ತಲೆಯೆತ್ತಲಾರದೆ
ಸಾಗುತ್ತಿರುವ ದಾರಿಯು
ಹಿತವೆನಿಸದು ಮನಸ್ಸಿಗೆ

***ಅರವಿಂದ ಬಿಜ್ಜೆ***

## ಎಲ್ಲಿ ಮಾಯವಾಗಿ ಹೋಯ್ತು??



ಕೆಟ್ಟ ಕೊರೊನಾ ಸಟ್ ಅಂತ ಬಂದೊಡನೆ
ದಿಗಿಲು ಬಡದು, ದಿಕ್ಕು ತಪ್ಪಿ
ಜೀವ ಉಳಸಲು ಪರದಾಟ ಶುರುವಾಯ್ತು.

ಎಲ್ಲರ ಮುಖದ ನಗು ಮಾಯಾ...
ಹಬ್ಬ ಹರಿದಿನಗಳ ಸಂಭ್ರಮ ಮಾಯ...
ಮಕ್ಕಳ ಆಟ ಪಾಠ ಸದ್ದು-ಗದ್ದಲವೂ ಮಾಯ...
ಮದುವೆಯ ಗೌಜೂ ಮಾಯ...

ಝುಗಝುಗಿಸುವ ಜರತಾರಿ ಸೀರೆಗಳ ಸ್ಪರ್ಧೆಯೂ ಮಾಯ...
ಘಮಘಮಿಸುವ ಹೂಮಾಲೆಗಳ
ಸಿಂಗಾರವೂ ಮಾಯ...
ಜಂಬದಿ ಓಡಾಡುವ ಹೊಸ ಜೋಡಿಗಳೂ ಮಾಯ...

ಔತಣ ಕೂಟಗಳ ಕಲರವವೂ ಮಾಯ...
ದೇಶವಿದೇಶಗಳ ಪರ್ಯಟನೆಗಳೂ ಮಾಯ...
ಮನೆಯ ಹೊರಗೆ ತಿರುಗುವ ಹಂಬಲವೂ
ಮಾಯ...

ತಿರುಗಣಿ ಮಡುವಿನಲ್ಲಿ ಗರಗರನೇ ಸುತ್ತುತ್ತಾ,
ಅತ್ತಿತ್ತ ಅಲುಗಾಡದಂತೆ ಮತಿಹೀನತೆಯಲ್ಲಿ
ತೊಳಲಾಡುತ್ತಿರುವೆವು.

ಎಲ್ಲರ ಕನಸುಗಳು ನನಸಾಗಿಸಿ,
ಮುದುಡಿದ ಮುಖಗಳರಳಿಸಲು
ಮಾಯವಾಗಿ ಹೋದ ಆ ಜೀವಂತಿಕೆಯ ಜೀವನವನ್ನು
ಮತ್ತೆ ಮರಳ ನೀಡಯ್ಯಾ
ಮಾಟಗಾರ ಹೇ ದೇವ...

***ಚಂದಾ/ಸವಿತಾ ಇನಾಮದಾರ***

# ಅರ್ಧ ಸತ್ಯ

ಒಬ್ಬ ನಾವಿಕನು ಮೂರು ವರ್ಷದಿಂದ ಹಡಗಿನಲ್ಲಿ ಕೆಲಸ ಮಾಡುತ್ತಿದ್ದನು. ಒಂದು ದಿನ ನಾವಿಕ ರಾತ್ರಿಯಲ್ಲಿ ಮದ್ಯ ಕುಡಿದು ಪಾನಮಾತ್ತನಾಗಿದ್ದನು. ಈ ತರಹ ಘಟನೆ ಮೊದಲನೆಯ ಸಲ ಸಂಭವಿಸಿತ್ತು. ಕ್ಯಾಪ್ಟನ್ ಈ ಘಟನೆಯನ್ನು ರಿಜಿಸ್ಟರ್‌ನಲ್ಲಿ ಈ ತರಹ ದಾಖಲಿಸಿದನು. "ನಾವಿಕ ಇಂದು ರಾತ್ರಿ ಮದ್ಯ ಕುಡಿದಿದ್ದನು."

ನಾವಿಕ ಈ ಸಾಲನ್ನು ಓದಿದ. ಈ ಒಂದು ವಾಕ್ಯವು ತನ್ನ ಕೆಲಸದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ ಎಂದು ನಾವಿಕನಿಗೆ ತಿಳಿಯಿತು. ಆದ್ದರಿಂದ ನಾವಿಕ ಕ್ಯಾಪ್ಟನ್ ಬಳಿ ಹೋಗಿ, ಕ್ಷಮೆಯಾಚಿಸಿ ಕೇಳಿದನು. ಕ್ಯಾಪ್ಟನ್ ಸರ್ ಮೂರು ವರ್ಷಗಳಲ್ಲಿ ಮೊದಲ ಸಲ ಸಂಭವಿಸಿದೆ ಎಂದು ಮತ್ತೊಂದು ಸಾಲು ಜೋಡಿಸಿ ಎಂದು ಕೇಳಿಕೊಂಡನು. ಏಕೆಂದರೆ ಇದು ಸಂಪೂರ್ಣ ಸತ್ಯ. ಕ್ಯಾಪ್ಟನ್ ಮೇಲಿನ ಸಾಲನ್ನು ಸೇರಿಸಲು ನಿರಾಕರಿಸಿದನು ಮತ್ತು ನಾನು ರಿಜಿಸ್ಟರ್‌ನಲ್ಲಿ ಏನನ್ನು ನಮೂದಿಸಿದ್ದೇನೆ ಅದೇ ಸತ್ಯ." ಎಂದು ಹೇಳಿದನು. ಕೆಲವು ದಿನಗಳ ನಂತರ ನಾವಿಕನಿಗೆ ರಿಜಿಸ್ಟರ್ ತುಂಬುವ ಸರದಿ ಬಂದಿತು. ಆಗ ನಾವಿಕನು ರಿಜಿಸ್ಟರ್‌ನಲ್ಲಿ ಈ ರೀತಿಯಾಗಿ ಬರೆದನು–"ಇಂದಿನ ರಾತ್ರಿ ಕ್ಯಾಪ್ಟನ್ ಮದ್ಯ ಕುಡಿದಿರಲಿಲ್ಲ".

ಕ್ಯಾಪ್ಟನ್ ಈ ಸಾಲು ಓದಿದ ನಂತರ ನಾವಿಕನಿಗೆ ಸಾಲನ್ನು ಬದಲಾಯಿಸು



ಅಥವಾ ಇಡೀ ವಿಷಯವನ್ನು ಬರೆಯಲು ಮುಂದೆ ಏನಾದರೂ ಸೇರಿಸು ಏಕೆಂದರೆ ಕ್ಯಾಪ್ಟನ್ ಪ್ರತಿ ರಾತ್ರಿ ಹಡಗಿನಲ್ಲಿ ಕುಡಿಯುತ್ತಿದ್ದನೆಂದು ಅರ್ಥ ಬರುತ್ತದೆ ಎಂದನು. ರಿಜಿಸ್ಟರ್‌ನಲ್ಲಿ ತಾನು ಬರೆದದ್ದೆಲ್ಲವೂ ನಿಜ ಎಂದು ನಾವಿಕ ಕ್ಯಾಪ್ಟನ್‌ಗೆ ಹೇಳಿದ. ಇಬ್ಬರ ವಿಷಯಗಳು ಸತ್ಯವಾಗಿದ್ದವು. ಆದರೆ ಎರಡರಿಂದಲೂ ಬರುವ ಸಂದೇಶವು ಸುಳ್ಳಿನ ಸಮಾನವಾಗಿತ್ತು.

**ಅಭಿಪ್ರಾಯ**

ಮೊದಲು–ನಾವು ಎಂದಿಗೂ ಈ ತರಹ ಮಾತನಾಡಬಾರದು, ಅದು ಸರಿಯಾಗಿದ್ದರೂ ಅದು ತಪ್ಪು ಸಂದೇಶವನ್ನು ನೀಡುತ್ತದೆ. ಮತ್ತು ಎರಡನೆಯದು, ಏನನ್ನಾದರೂ ಕೇಳಿ ನಿಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಮೊದಲು ಯಾವುದಾದರೂ ಬೇರೆ ಅಂಶವಿದೆಯೇ ಎಂದು ಒಮ್ಮೆ ಯೋಚಿಸಬೇಕು. ಸಂಕ್ಷಿಪ್ತವಾಗಿ ಹೇಳುವುದಾದರೆ ನಾವು ಅರ್ಧ–ಸತ್ಯಗಳಿಂದ ತಪ್ಪಿಸಿಕೊಳ್ಳಬೇಕು. ಯಾವಾಗಲೂ ಸಂತೋಷವಾಗಿರಿ.

***ಚಂದ್ರಶೇಖರ ಜೋಳದರಾಶಿ***

# ವಿದ್ಯಾರ್ಥಿಗಳಿಂದ ಗೀತಗಾಯನ

ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವುದು ಮೊದಲ ಹೆಜ್ಜೆ. ಮಕ್ಕಳಿಗಾಗಿ ಸೃಷ್ಟಿಸಿದ ಇಂತಹ ವೇದಿಕೆಗಳೇ ಮಕ್ಕಳ ಮುಂದಿನ ಭವಿಷ್ಯಕ್ಕೆ ದಾರಿದೀಪ. ಕೊರೊನಾದ ಈ ಸಂದರ್ಭದಲ್ಲಿ ಶಾಲಾ ಜೀವನದಿಂದ ದೂರವಾಗಿ ಮನೆಯಲ್ಲಿಯೇ ಕುಳಿತ ಮಕ್ಕಳ ಮನಸ್ಥಿತಿ ಹೇಳಿಕೊಳ್ಳಲಾಗದಂತಿದೆ. ಮಕ್ಕಳು ಮಕ್ಕಳ ಜೊತೆ ಬೆರೆತರೆ ಮಾತ್ರ ಅವರ ಮನಸ್ಥಿತಿ ಸರಿದೂಗುತ್ತದೆ. ಮಕ್ಕಳಿಗೆ ಯಾವ ಕ್ಷೇತ್ರದಲ್ಲಿ ಆಸಕ್ತಿ ಇದೆಯೋ ಅದಕ್ಕೆ ಶಿಕ್ಷಕರು, ಪೋಷಕರು ಪ್ರೋತ್ಸಾಹ ನೀಡಬೇಕು. ಇಂದಿನ ಈ ಕಾರ್ಯಕ್ರಮದಲ್ಲಿ ಕನ್ನಡೇತರ ಮಕ್ಕಳು ಕನ್ನಡ ಹಾಡುಗಳನ್ನು ಪ್ರಸ್ತುತಪಡಿಸಿದ ರೀತಿ ಹಾಗೂ ರಾಷ್ಟ್ರ ರಾಜಧಾನಿಯಲ್ಲಿ ಇಂತಹ ಅರ್ಥಗರ್ಭಿತ ಕನ್ನಡ ಚಟುವಟಿಕೆಗಳನ್ನು ಆಯೋಜಿಸುತ್ತಿರುವುದು ಕನ್ನಡಿಗರಾದ ನಮಗೆಲ್ಲರಿಗೂ ಅಭಿಮಾನದ ಸಂಗತಿ ಎಂದು ಖ್ಯಾತ ಜನಪದ ಗಾಯಕಿ ಶ್ರೀಮತಿ ಸವಿತಾಕ್ಕ ಹೇಳಿದರು.

ಅವರು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಸಾಂಸ್ಕೃತಿಕ ಸಮಿತಿಯು ದಿನಾಂಕ 27.06.2021, ರವಿವಾರದಂದು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಕನ್ನಡ, ಕನ್ನಡೇತರ ವಿದ್ಯಾರ್ಥಿಗಳಿಗೆ ನಿಸ್ತಂತು ಮಾಧ್ಯಮದ ಮೂಲಕ ಆಯೋಜಿಸಿದ ಗೀತಗಾಯನ ಭಾಗ – 2 ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಜನಪದ ಗೀತೆಗಳನ್ನು ಪ್ರಸ್ತುತಪಡಿಸಿದರು.

ಕಾರ್ಯಕ್ರಮದಲ್ಲಿ ವಚನ, ಭಕ್ತಿಗೀತೆ, ದೇಶಭಕ್ತಿಗೀತೆ, ಜನಪದ ಗೀತೆಗಳನ್ನು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳಾದ ಶಿವಾನ್ಯ, ಆಯಿಶಾ, ಅಭಿನಯ ಕೌರಲ್, ವೃದ್ಧಿ ಸಾಹುಕಾರ್, ಚಿರಾಗ್, ಶಿವಾಂಜಲಿ, ಎಚ್. ಜಿ. ಸುಪ್ರಿತಾ, ಭೂಮಿ ಜೋಶಿ, ಸಾತ್ವಿಕ, ಕಾರ್ತಿಕ್ ಆಚಾರ್ಯ, ಶಿವೇನ್, ಮನನ್ ಮನೋಜ್ ಕುಮಾರ್, ಅನುಷ್ಕಾ ಚೋಪ್ರಾ, ಪ್ರಾಚಿ, ವಾಣಿ ಬೆನ್ನೂರು, ಕೆ. ಎನ್. ಜಯಶ್ರೀ, ಮಾನ್ಸಿ ಸಿನ್ಹಾ, ಅನ್ವಿಕಾ, ಶೃತಿ ಸೋನಿ, ಕುಂದನ್ ಸಿಂಗ್, ಕೀರ್ತಿ, ವಂಶಿಕಾ ಬನ್ಸ್ಯಾ, ವಂಶಿಕಾ ಜ್ಹಾ, ಅನ್ವಿಕಾ ಜ್ಹಾ, ಸಾಕ್ಷಿ, ಶ್ರದ್ಧಾ, ದಿವ್ಯಾಂಗಿ ಅವರು ಸುಶ್ರಾವ್ಯವಾಗಿ ಪ್ರಸ್ತುತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ವಹಿಸಿದ್ದರು. ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಎಂ. ಎಸ್. ಶಶಿಕುಮಾರ್, ಉಪಾಧ್ಯಕ್ಷ ಮತ್ತು ಸಾಂಸ್ಕೃತಿಕ ಸಮಿತಿಯ ಸಂಚಾಲಕ ಟಿ.ಎಂ. ಮೈಲಾರಪ್ಪ, ಆಡಳಿತ ಮಂಡಳಿ ಸದಸ್ಯ ಗಿರೀಶ್ ಎಸ್. ಉಪಸ್ಥಿತರಿದ್ದರು. ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯೆ ಮಾಲಿನಿ ಪ್ರಹ್ಲಾದ್ ಸ್ವಾಗತಿಸಿದರು, ಸದಸ್ಯ ತಿಮ್ಮಪ್ಪ ಜಿ.ಆರ್. ಅವರು ವಂದಿಸಿದರು. ಶಿಕ್ಷಕಿ ರೇಖಾ ಐ., ವಿಕಾಸ್ ಕಠಾರಿಯ ಕಾರ್ಯಕ್ರಮ ನಿರೂಪಿಸಿದರು.

***ಅರವಿಂದ ಬಿಜ್ಜೆ***

# ಕಲಿಕೆಯ ಅಡಿಪಾಯ ಸುಭದ್ರವಾಗಿದ್ದರೆ ಭವಿಷ್ಯ ಉಜ್ವಲವಾಗಿರುತ್ತದೆ

**-ಎಚ್. ರಾಜೇಶ್ ಪ್ರಸಾದ್**



ಈ ಜಗತ್ತಿನಲ್ಲಿ ಅತ್ಯುತ್ತಮವಾದ, ಮತ್ತು ಹೆಚ್ಚು ಗೌರವಿಸಲ್ಪಡುವ ವೃತ್ತಿಯೇ ಶಿಕ್ಷಕ ವೃತ್ತಿ. ಶಿಕ್ಷಕರು ನಿರಂತರ ಅಧ್ಯಯನ, ನೂತನ ಕಲಿಕಾ ವಿಧಾನ ತಂತ್ರಗಳಿಂದ ವಿದ್ಯಾರ್ಥಿಗಳಿಗೆ ಆದರ್ಶವಾಗಿರಬೇಕು. ಶಿಕ್ಷಕರ ಪ್ರತಿಯೊಂದು ವರ್ತನೆಗಳನ್ನು ವಿದ್ಯಾರ್ಥಿಗಳು ಅನುಕರಣೆ ಮಾಡುತ್ತಾರೆ. ವೃತ್ತಿಯನ್ನು ಪ್ರೀತಿಸಿದಾಗ ಮಾತ್ರ ಹೊಸತನಗಳಿಗೆ ತೆರೆದುಕೊಳ್ಳಲು ಸಾಧ್ಯ. ಕಲಿಕೆಯ ಅಡಿಪಾಯ ಸುಭದ್ರವಾಗಿದ್ದರೆ ಭವಿಷ್ಯ ಉಜ್ವಲವಾಗಿರುತ್ತದೆ. ಪಠ್ಯಕ್ರಮ, ಫಲಿತಾಂಶಗಳು ಮಾತ್ರ ವಿದ್ಯಾರ್ಥಿಯ ಮಾನದಂಡವಲ್ಲ. ಒಂದು ತರಗತಿಯಲ್ಲಿ ವಿವಿಧ ಮನೋಭಾವದ, ಬೌದ್ಧಿಕಮಟ್ಟದ ವಿದ್ಯಾರ್ಥಿಗಳಿರುತ್ತಾರೆ. ಅವರೆಲ್ಲರನ್ನು ಕಲಿಕೆಯ ಪ್ರಕ್ರಿಯೆಯಲ್ಲಿ ಜೊತೆಗೂಡಿಸಿ ಮುನ್ನಡೆಯುವ ಕೌಶಲ ಶಿಕ್ಷಕರಲ್ಲಿ ಇರಬೇಕು. ಉತ್ತಮ ನಾಗರೀಕರನ್ನು ಸೃಷ್ಟಿಸುವ ಜವಾಬ್ದಾರಿಯೂ ಶಿಕ್ಷಕರ ಮೇಲಿದೆ. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯನ್ನು, ಇಲ್ಲಿನ ಶಾಲಾ ಸಂರಚನೆಯನ್ನು ಕಂಡಾಗ ಸಂತೋಷವಾಗುತ್ತದೆ. ಕ್ರಿಯಾಶೀಲ ಅಧ್ಯಕ್ಷರ ಯೋಚನೆ, ಯೋಜನೆಗಳಿಂದ ಸಂಸ್ಥೆಯು ಮಾದರಿಯಾಗಿದೆ. ಇಂತಹ ಮಹಾನಗರಗಳಲ್ಲಿ ಸುಸಜ್ಜಿತ ಮೈದಾನ, ಕೊಠಡಿಗಳು ಉತ್ತಮ ಶಿಕ್ಷಕರನ್ನು ಹೊಂದಿದ ಈ ಸಂಸ್ಥೆಯಲ್ಲಿ ಪ್ರತಿವರ್ಷ ಸಾವಿರಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಓದುತ್ತಿರುವುದು ನಿಜಕ್ಕೂ ಕನ್ನಡಿಗರಾದ ನಮ್ಮ ಸೌಭಾಗ್ಯ ಎನ್ನಬಹುದು ಎಂದು ದೆಹಲಿ ಸರಕಾರದ ಶಿಕ್ಷಣ ಇಲಾಖೆ ಹಾಗೂ ಕಾರ್ಮಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಚ್. ರಾಜೇಶ್ ಪ್ರಸಾದ್ ಹೇಳಿದರು.

ಅವರು ಇತ್ತೀಚೆಗೆ ಫೇಸ್‌ಬುಕ್ ನೇರಪ್ರಸಾರದ ಮೂಲಕ ನಡೆದ ನವದೆಹಲಿಯ ಲೋಧಿ ಎಸ್ಟೇಟ್‌ನಲ್ಲಿರುವ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ನವೀಕೃತ ಶಿಕ್ಷಕರ ಕೊಠಡಿಯ ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರು ವಹಿಸಿದ್ದರು. ಸಂಸ್ಥೆಯ ಗೌರವ ಖಜಾಂಚಿ ಟಿ.ಪಿ. ಬೆಳ್ಳಿಯಪ್ಪ, ಆಡಳಿತ ಮಂಡಳಿ ಸದಸ್ಯರಾದ ಮಾಲಿನಿ ಪ್ರಹ್ಲಾದ್, ಬಿ.ಎನ್. ಮೋಹನ್ ಕುಮಾರ್, ಶಾಲಾ ಶಿಕ್ಷಣ ಸಲಹೆಗಾರ ಜಯ ಕುಮಾರ್ ಉಪಸ್ಥಿತರಿದ್ದರು. ಶಿಕ್ಷಕಿ ಪ್ರೊಮಿಳಾ ದಹಿಯಾ ಸ್ವಾಗತಿಸಿದರು. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲರಾದ ಪ್ರಶಾಂತ್ ಕುಮಾರ್ ವಂದಿಸಿದರು. ಶಿಕ್ಷಕಿ ಬಿದಿಶಾ ಕಾರ್ಯಕ್ರಮ ನಿರೂಪಿಸಿದರು.

# ಕನ್ನಡ ಗಾಯನ ಕಾರ್ಯಕ್ರಮ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಸಾಂಸ್ಕೃತಿಕ ಸಮಿತಿಯು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಕನ್ನಡ, ಕನ್ನಡೇತರ ವಿದ್ಯಾರ್ಥಿಗಳಿಗೆ ಆಯೋಜಿಸಿದ ನಿಸ್ತಂತು ಮಾಧ್ಯಮ ಕಾರ್ಯಕ್ರಮ ಕನ್ನಡ ಗಾಯನವು ದಿನಾಂಕ 06.06.2021 ದಂದು ಜರುಗಿತು. ವಚನ, ಭಕ್ತಿಗೀತೆ, ಭಾವಗೀತೆ, ದೇಶಭಕ್ತಿಗೀತೆ, ಜನಪದ ಗೀತೆ, ಶಿಶುಗೀತೆಯನ್ನು ವಿದ್ಯಾರ್ಥಿಗಳಾದ ಸುನಿಲ್, ನಿಷ್ಠಾ ಪೂಜಾರಿ, ಹರ್ಷಿತಾ ಉಭಾಳೆ, ಜೈನಬ್, ಮೊಹಮ್ಮದ್ ಸಾಹಿಲ್, ಲಕ್ಷ್ಯಾ ಸಮಾನಿಯ, ಪ್ರತಿಮೇಶ್, ಖುಷಿ, ಸೃಷ್ಠಿ ಪೂಜಾರಿ, ನಂದಿತಾ ಉಭಾಳೆ, ಕೀರ್ತನ್ ಪಿ., ಸುಮಂತ್ ಆಚಾರ್ಯ, ಅಭಿಷೇಕ್ ಉಭಾಳೆ, ಸಿ.ಬಿ. ವೈಷ್ಣವಿ, ಸೃಷ್ಟಿ ಎಸ್. ಪೊದ್ದಾರ್ ಅವರು ಸುಶ್ರಾವ್ಯವಾಗಿ ಪ್ರಸ್ತುತಪಡಿಸಿದರು.

ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರು ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಮಕ್ಕಳಲ್ಲಿರುವ ಏಕಾಂಗಿತನವನ್ನು ಹೋಗಲಾಡಿಸಲು, ಕನ್ನಡ ಹಾಗೂ ಕನ್ನಡೇತರ ವಿದ್ಯಾರ್ಥಿಗಳಲ್ಲಿ ಕನ್ನಡ ಸಾಹಿತ್ಯ, ಸಂಸ್ಕೃತಿಯ ವೈಶಿಷ್ಟ್ಯತೆಯನ್ನು ಪರಿಚಯಿಸಲು ಜೊತೆಗೆ ಮಕ್ಕಳಲ್ಲಿನ ಪ್ರತಿಭೆಗಳನ್ನು ಗುರುತಿಸಿ, ಪ್ರೋತ್ಸಾಹಿಸಲು ಇಂತಹ ಕಾರ್ಯಕ್ರಮಗಳು ಪ್ರಸ್ತುತ ಕಾಲಘಟ್ಟದಲ್ಲಿ ಬಹಳ ಅಗತ್ಯವಾದುದು ಎಂದರು. ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರಾದ ತಿಮ್ಮಪ್ಪ ಜಿ. ಆರ್., ಮಾಲಿನಿ ಪ್ರಹ್ಲಾದ್, ದೀನಾ ಜಾಯ್ಸ್ ಉಪಸ್ಥಿತರಿದ್ದರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಮತ್ತು ಸಾಂಸ್ಕೃತಿಕ ಸಮಿತಿಯ ಸಂಚಾಲಕ ಟಿ.ಎಂ. ಮೈಲಾರಪ್ಪ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಎಂ.ಎಸ್. ಶಶಿಕುಮಾರ್ ಸ್ವಾಗತಿಸಿದರು. ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯ ಗಿರೀಶ್ ಎಸ್. ಅವರು ವಂದಿಸಿದರು. ಶಿಕ್ಷಕರಾದ ಶ್ರೀಮತಿ ಲಾವಣ್ಯ ಎಂ. ಎಸ್. ಕಾರ್ಯಕ್ರಮ ನಿರೂಪಿಸಿದರು.

***ಅರವಿಂದ ಬಿಜೈ***

# ಡಾ. ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಕಲ್ಚರ್ ಫೌಂಡೇಷನ್‌ನಿಂದ
# ಕವಿ ಸಿದ್ದಲಿಂಗಯ್ಯನವರಿಗೆ ಶ್ರದ್ಧಾಂಜಲಿ

ಹಿರಿಯ ಕವಿ ಡಾ. ಸಿದ್ದಲಿಂಗಯ್ಯನವರು ಕೊರೊನ ಮಹಾಮಾರಿಯ ರೋಗಕ್ಕೆ ತುತ್ತಾಗಿ ದಿನಾಂಕ 11.06.2021 ರಂದು ಇಹಲೋಕ ತ್ಯಜಿಸಿದರು. ದಿನಾಂಕ 12.06.2021 ರಂದು ನವದೆಹಲಿಯ ಡಾ. ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಕಲ್ಚರ್ ಫೌಂಡೇಷನ್ ಡಾ. ಸಿದ್ದಲಿಂಗಯ್ಯನವರ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಝೂಮ್ ಮೀಟಿಂಗ್ ಮೂಲಕ ಆಯೋಜಿಸಿತ್ತು.

ಈ ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಸಾಹಿತಿ ಡಾ. ಪುರುಷೊತ್ತಮ ಬಿಳಿಮಲೆ, ದೆಹಲಿ ಸರ್ಕಾರದ ತಾಂತ್ರಿಕ ವಿಶ್ವವಿದ್ಯಾಲಯದ ಜಂಟಿ ನಿರ್ದೇಶಕ ಡಾ. ಎಸ್.ಎಲ್. ಭಂಡಾರ್‌ಕರ್, ಮೈಸೂರಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ನಾರಾಯಣ ಸ್ವಾಮಿ, ಪರಿಸರವಾದಿ ಶಿವಮಲ್ಲು, ದೆಹಲಿಯ ರಂಗಕರ್ಮಿ ಶಿವಾನಂದ ಇಂಗಳೇಶ್ವರ, ಯುವ ಹೋರಾಟಗಾರ ಕರುಣಾಶೀಲ, ಭಾರತ ಸರ್ಕಾರದ ರಕ್ಷಣಾ ಇಲಾಖೆಯ ಉಪ ನಿರ್ದೇಶಕ ಹರಿಪ್ರಿಯ ಎಸ್, ದೆಹಲಿ ಪೋಲಿಸ್‌ನ ಟಿ.ಎಂ. ಮೈಲಾರಪ್ಪ, ಭಾರತ ಸರ್ಕಾರದ ಆರೋಗ್ಯ ಮಂತ್ರಾಲಯದ ಟಿ.ಎಸ್. ರಮೇಶ್, ಬಹುಜನ ಸಮಾಜದ ಯುವ ಹೋರಾಟಗಾರ ಜಿ.ಕೆ. ಶ್ರೀಧರ್ ಮೂರ್ತಿ, ದೆಹಲಿ ಪೋಲಿಸ್‌ನ ಗಿರೀಶ್ ಇವರು ಭಾಗವಹಿಸಿದ್ದರು.

ಡಾ. ವೆಂಕಟಾಚಲ ಹೆಗಡೆಯವರು ಮಾತನಾಡುತ್ತಾ ಡಾ. ಸಿದ್ದಲಿಂಗಯ್ಯನವರು ಕನ್ನಡದ ಶ್ರೇಷ್ಠ ಬರಹಗಾರರಲ್ಲಿ ಒಬ್ಬರು, ದಲಿತ ಸಾಹಿತ್ಯವನ್ನು ರಚಿಸಿ, ದಲಿತ ಕವಿ ಎಂದೇ ಖ್ಯಾತಿ ಹೊಂದಿದವರು, ದೆಹಲಿ ಕರ್ನಾಟಕ ಸಂಘಕ್ಕೆ ಹಲವಾರು ಬಾರಿ ಭೇಟಿ ನೀಡಿದ್ದರು. ತುಂಬಾ ಸೌಮ್ಯ ಸ್ವಾಭಾವದರು, ಅವರನ್ನು ಕಳೆದುಕೊಂಡು ಸಾಹಿತ್ಯ ಲೋಕ ಬಡವಾಗಿದೆ ಎಂದು ಸಂತಾಪ ವ್ಯಕ್ತಪಡಿಸಿದರು.

ಡಾ. ಪುರೋಷೊತ್ತಮ ಬಿಳಿಮಲೆಯವರು ಮಾತನಾಡುತ್ತಾ ಡಾ. ಸಿದ್ದಲಿಂಗಯ್ಯನವರು ದಲಿತ ಚಳುವಳಿಗಾಗಿ ಅನೇಕ ಸಾಹಿತ್ಯವನ್ನು ರಚಿಸಿದವರು. ಓದಿನ ಸಮಯದಲ್ಲಿಯೇ ಸಾಹಿತ್ಯದ ಮೂಲಕ ಚಳುವಳಿಗೆ ಧುಮುಕಿದವರು, ದಲಿತ ಸಾಹಿತ್ಯದ ಮೂಲಕ ಚಳುವಳಿಗೆ ಶಕ್ತಿ ತುಂಬಿದವರು, ಬಡತನ ಮತ್ತು ಶೋಷಿತ ವರ್ಗದಿಂದ ಬಂದು ಶೋಷಿತರ ನೋವಿಗೆ ಬೆಳಕಾಗಿದ್ದವರು ಸಾಹಿತ್ಯದಿಂದ ಸಮ ಸಮಾಜವನ್ನು ನಿರ್ಮಿಸಬಹುದೆಂದು ತೋರಿಸಿಕೊಟ್ಟವರು. ತಮ್ಮ ಕವನ, ಗೀತೆ ಮತ್ತು ಲೇಖನಗಳ ಮುಖೇನ ಸಮಾಜವನ್ನು ಎಚ್ಚರಿಸಿದವರು ಎಂದು ಅವರ ಜೀವನದ ಒಡನಾಟದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಹಾರೈಸಿದರು.

ಇದೇ ಸಂದರ್ಭದಲ್ಲಿ ಡಾ. ಸಿದ್ದಲಿಂಗಯ್ಯನವರ ಆತ್ಮಕ್ಕೆ ಶಾಂತಿಸಿಗಲೆಂದು ಪ್ರಾರ್ಥಿಸುತ್ತಾ ಅವರ ಮಾನವ ಪರ ಹೋರಾಟ, ಚಿಂತನೆ ಮತ್ತು ಭಂಡಾಯ ಲೇಖನಗಳ ಹೋರಾಟದ ಬದುಕನ್ನು ಪರಿಗಣಿಸಿ ಭಾರತ ಸರ್ಕಾರದ ಅತ್ಯುನ್ನತ ಪ್ರಶಸ್ತಿ ಭಾರತ ರತ್ನವನ್ನು ನೀಡಿ ಗೌರವಿಸಬೇಕಾಗಿ ಮನವಿ ಮಾಡಲು ನಿರ್ಧರಿಸಲಾಯಿತು.





**ಎಸ್. ಕುಮಾರ್**

## ಕವಿ ಸಿದ್ದಲಿಂಗಯ್ಯ ಬದುಕು, ಸಾಧನೆ



ಡಾ. ಸಿದ್ದಲಿಂಗಯ್ಯನವರು ಬೆಂಗಳೂರು ಗ್ರಾಮಾಂತರ ಜಿಲ್ಲೆ 'ಮಾಗಡಿ' ತಾಲೂಕಿನ 'ಮಂಚನಬೆಲೆ' ಗ್ರಾಮದಲ್ಲಿ 1954ರಲ್ಲಿ ಜನಿಸಿದರು. ದೇವಯ್ಯ ಮತ್ತು ವೆಂಕಮ್ಮ ದಂಪತಿಗಳ ಮಗನಾದ ಇವರು ಮಲ್ಲೇಶ್ವರಂನ ಸರ್ಕಾರಿ ಪ್ರೌಢ ಶಾಲೆ ಇವರ ವಿದ್ಯಾ ಕೇಂದ್ರವಾಗಿತ್ತು. ಆ ವೇಳೆಗಾಗಲೇ ಕವಿತೆ ಬರೆಯುವ ಅಭ್ಯಾಸ ಬೆಳೆಸಿಕೊಂಡಿದ್ದರು. ವಿದ್ಯಾರ್ಥಿ ದೆಸೆಯಲ್ಲಿಯೇ ಉತ್ತಮ ಭಾಷಣಕಾರರಾಗಿದ್ದರು. ಅಂಬೇಡ್ಕರ್, ಪೆರಿಯಾರ್, ವಸುದೇವ ಭೂಪಾಲ, ಲೋಹಿಯಾ ಮುಂತಾದವರ ವಿಚಾರಧಾರೆಗಳಿಂದ ಆಕರ್ಶಿತರಾಗಿ ಪ್ರೇರಣೆಗೊಳಗಾದವರು.

ಡಾ. ಸಿದ್ದಲಿಂಗಯ್ಯ, ಸಾಹಿತಿಗಳು, ಲೇಖಕರು, ಕಾವ್ಯ, ನಾಟಕ, ಸಂಶೋಧನೆ ಆತ್ಮಕಥನಗಳ ಹಲವಾರು ಪ್ರಕಾರಗಳ ಸಾಹಿತ್ಯವನ್ನು ರಚಿಸಿದವರು, ಕನ್ನಡ ನಾಡು ಕಂಡ ಅತ್ಯಂತ ಶ್ರೇಷ್ಠ ಬರಹಗಾರರು. ಬರವಣಿಗೆಗಳ ಮೂಲಕ ಮೂಕ ಮುಗ್ಧ ಜನರನ್ನು ನ್ಯಾಯ ಪರವಾಗುವಂತೆ ಎಚ್ಚರಿಸಿದ ಮಾಂತ್ರಿಕ, ದಲಿತ ಚಳುವಳಿಗಾಗಿ ಇವರು ಬರೆದ ಬಂಡಾಯ ಗೀತೆ 'ಯಾರಿಗೆ ಬಂತು ಎಲ್ಲಿಗೆ ಬಂತು 47 ಸ್ವಾತಂತ್ರ್ಯ, ಟಾಟ ಬಿರ್ಲರ ಜೇಬಿಗೆ ಬಂತು 47 ಸ್ವಾತಂತ್ರ್ಯ' ಈ ಹಾಡು ಇಡೀ ಸಮೂಹವನ್ನೆ ಎಚ್ಚರಿಸಿತು.

ಶೋಷಣೆಗೊಳಗಾದ ಸಮಾಜದ ಜನರ ಕೂಗಾಗಿ ಬೆಳೆದು ನಿಂತವರು. ಬರವಣಿಗೆಯಲ್ಲಿ ಸಮಾಜ ಸುಧಾರಣೆ, ಅನ್ಯಾಯ ಮತ್ತು ಮಾನವ ಸಮಾನತೆಯ ಚಿಂತನೆಗೆ ಪ್ರರಣೆ ತುಂಬಿದವರು. ಇವರ ಕೃತಿಗಳು ಪಿ.ಎಚ್.ಡಿ. ಸಂಶೋಧನಾ ಪ್ರಬಂಧ ಗ್ರಾಮದೇವತೆಗಳು, ಕವನ ಸಂಕಲನಗಳು, ಹೊಲೆ ಮಾದಿಗರ ಹಾಡು, ಮೆರವಣಿಗೆ, ಸಾವಿರಾರು ನದಿಗಳು, ಕಪ್ಪು ಕಾಡಿನ ಹಾಡು, ಆಯ್ದ ಕವಿತೆಗಳು, ಅಲ್ಲಕುಂತವರೆ, ನನ್ನ ಜನಗಳು ಮತ್ತು ಇತರ ಕವಿತೆಗಳು, ಸಮಕಾಲೀನ ಕನ್ನಡ ಕವಿತೆ ಭಾಗ-3, 4 (ಸಂಪಾದನೆ ಇತರರೊಂದಿಗೆ), ವಿಮರ್ಶನಾ ಕೃತಿಗಳು, ಹಕ್ಕಿ ನೋಟ, ರಸಗಳಿಗೆಗಳು, ಎಡಬಲ ಉರಿಕಂಡಾಯ.

ಲೇಖನಗಳ ಸಂಕಲನ, ಅವತಾರಗಳು, ಸದನದಲ್ಲಿ ಸಿದ್ದಲಿಂಗಯ್ಯ ಭಾಗ-1, 2, ಜನಸಂಸ್ಕೃತಿ, ಏಳು ನಾಟಕಗಳು, ಏಕಲವ್ಯ, ನೆಲಸಮ, ಪಂಚಮ, ಆತ್ಮಕಥೆ ಊರುಕೇರಿ-ಭಾಗ-1, 2,. ಗೌರವ ಪ್ರಶಸ್ತಿಗಳು, ಉತ್ತಮ ಚಲನಚಿತ್ರಗೀತ ರಚನೆಗಾಗಿ ರಾಜ್ಯ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಡಾ. ಅಂಬೇಡ್ಕರ್ ಶತಮಾನೋತ್ಸವ ವಿಶೇಷ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಜಾನಪದ ತಜ್ಞ ಪ್ರಶಸ್ತಿ, ಎರಡು ಬಾರಿ ಕರ್ನಾಟಕ ರಾಜ್ಯ ವಿಧಾನ ಪರಿಷತ್ ಸದಸ್ಯರು, ಸಂದೇಶ್ ಪ್ರಶಸ್ತಿ, ಡಾ. ಅಂಬೇಡ್ಕರ್ ಪ್ರಶಸ್ತಿ, ಸತ್ಯಕಾಮ ಪ್ರತಿಷ್ಠಾನ ಪ್ರಶಸ್ತಿ, ಬಾಬು ಜಗಜೀವನರಾಮ್ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಪ್ರೆಸಿಡೆನ್ಸಿ ಇನ್ಸ್ಟಿಟ್ಯೂಷನ್ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ಶ್ರವಣಬೆಳಗೊಳದಲ್ಲಿ ನಡೆದ 81ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು, ನೃಪತುಂಗ ಪ್ರಶಸ್ತಿ, ಪಂಪ ಪ್ರಶಸ್ತಿ, ನಂತರ ಕೇಂದ್ರ ಸಾಹಿತ್ಯ ಅಕಾಡೆಮಿಯ ದಕ್ಷಿಣ ಭಾರತದ ಸದ್ಯರಾಗಿದ್ದರು.

**ಎಸ್. ಕುಮಾರ್**

# ಮಕ್ಕಳ ಸಾಹಿತ್ಯ ಪರಿಷತ್ತಿನಿಂದ ಕವಿ ಸಿದ್ಧಲಿಂಗಯ್ಯನವರಿಗೆ ಶ್ರದ್ಧಾಂಜಲಿ

ಕನ್ನಡ ಸಾರಸ್ವತ ಲೋಕದಿಂದ ಇತ್ತೀಚೆಗೆ ದೂರವಾದ ಕನ್ನಡದ ಕಾವ್ಯ ಕುಸುಮ, ಜನತೆಯ ಕವಿ, ಸ್ವಾಭಿಮಾನದ ಕವಿ, ಶೋಷಣೆಯನ್ನು, ಅಸಮಾನತೆಯನ್ನು ಕಾವ್ಯದ ಮೂಲಕ ಪ್ರತಿಭಟಿಸಿ ಸಮಾಜವನ್ನು ಬದಲಾಯಿಸಿ ಕನ್ನಡ ಕಾವ್ಯ ಪರಂಪರೆಗೆ ಹೊಸ ದಿಕ್ಸೂಚಿ ನೀಡಿದ ಖ್ಯಾತ ಕವಿ ನಾಡೋಜ ಡಾ. ಸಿದ್ಧಲಿಂಗಯ್ಯ ಅವರಿಗೆ ನುಡಿನಮನ ಕಾರ್ಯಕ್ರಮವನ್ನು ಇತ್ತೀಚೆಗೆ ಮಕ್ಕಳ ಸಾಹಿತ್ಯ ಪರಿಷತ್ತು ದೆಹಲಿ ಘಟಕದ ವತಿಯಿಂದ ಅಂತರ್ಜಾಲದ ಮೂಲಕ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಜಾನಪದ ವಿದ್ವಾಂಸರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಾತನಾಡಿ 1973-74ರಲ್ಲಿ ಸಾಮಾಜಿಕ ಎಚ್ಚರವನ್ನು ಮೂಡಿಸಿದಂತಹ ಘಟನೆಗಳು ಮೈಸೂರಿನಲ್ಲಿ ನಡೆದಾಗ ಅದರ ಪ್ರಭಾವಕ್ಕೆ ಒಳಗಾದವ ನಾನು. ಅಲ್ಲಿಯೇ ನಾನು ಮೊದಲ ಬಾರಿಗೆ ಸಿದ್ಧಲಿಂಗಯ್ಯನವರನ್ನು ಕಂಡದ್ದು. ಮಾದಿಗರ ಕೇರಿಯಿಂದ ಬಂದ ಹುಡುಗನಲ್ಲಿ ಕಂಡದ್ದು ನಾಚಿಕೆ, ಸಂಕೋಚ, ವಿನಯತೆ ಹಾಗೂ ಹಾಸ್ಯಪ್ರಜ್ಞೆ. ಅವರ ಹೊಲೆ ಮಾದಿಗರ ಹಾಡನ್ನು ಕೇಳಿದಾಗ ಕವಿಯ ಧ್ವನಿ ಜನಪರ ಎಂದೆನಿಸಿತು. ಮೈಸೂರಿನ ಘಟನೆ, ಹೊಲೆಮಾದಿಗರ ಹಾಡು ಜೊತೆಗೆ ಸಿದ್ಧಲಿಂಗಯ್ಯನವರು ಆ ಕಾಲದಲ್ಲಿ ನಮ್ಮ ಬದುಕಿನ ಚೈತನ್ಯದ ಭಾಗವಾಗಿದ್ದವು. ಇಕ್ರಲಾ ಒದಿರ್ಲಾ, ದಲಿತರು ಬಂದರು ದಾರಿ ಬಿಡಿ ದಲಿತರ ಕೈಗೆ ರಾಜ್ಯ ಕೊಡಿ, ಪರಮಾತ್ಮನ ಹೆಸರು ಹೇಳಿ ಪರಮಾನ್ನ ಉಂಡವರು ಸಿದ್ಧಲಿಂಗಯ್ಯನವರ ಕವಿತೆಯ ಈ ಸಾಲುಗಳು ಜನರನ್ನು ಬಡಿದೆಬ್ಬಿಸಿತು. ಇದೇ ಕವಿತೆಗಳು ಸಾಮಾಜಿಕ ಅಸಮಾನತೆಯ ವಿರುದ್ಧ ಹೋರಾಡಲು ನಮಗೆ ನೈತಿಕ ಧೈರ್ಯವನ್ನು ತುಂಬಿಸಿರುವುದು. 'ಕಾವ್ಯ ಬಂತು ಗೋಡೆಗೆ' ಎಂದುಕೊಂಡು ನಾನು ನನ್ನ ಗೆಳೆಯರು ಕಾಲೇಜುಗಳ ಗೋಡೆಯಲ್ಲಿ ಸಿದ್ಧಲಿಂಗಯ್ಯನವರ ಕವಿತೆಗಳನ್ನು ಬರೆದಿದ್ದೆವು. ಇವರ ಕವಿತೆಗಳು ಪ್ರಾರ್ಥನೆಯ ಪರಿಕಲ್ಪನೆಯನ್ನು ಅಲ್ಲಗಳೆದಿದ್ದವು. ಅವರನ್ನು ಕಳಕೊಂಡಾಗ ನಮ್ಮ ಚೈತನ್ಯದ ಒಂದು ಭಾಗವನ್ನೇ ಕಳಕೊಂಡ ಹಾಗೆ ಅನ್ನಿಸಿತು. ವೈಚಾರಿಕತೆ, ಭಾವುಕತೆಯನ್ನು ಒಟ್ಟು ಸೇರಿಸಿ ಲೋಕೋತ್ತರ ನೆಲೆಗೆ ಕೊಂಡುಹೋಗದೆ ಲೌಕಿಕದ ನೆಲೆಯಲ್ಲಿ ನಿಲ್ಲಿಸಿರುವುದು ಕನ್ನಡ ಸಾಹಿತ್ಯಕ್ಕೆ ಸಿದ್ಧಲಿಂಗಯ್ಯನವರು ನೀಡಿದ ಅತಿದೊಡ್ಡ ಕೊಡುಗೆ ಎನ್ನುವ ಮೂಲಕ ಕವಿಗೆ ನುಡಿನಮನವನ್ನು ಅರ್ಪಿಸಿದರು.


ಹಂಪಿ ಕನ್ನಡ ವಿ.ವಿ.ಯ ವಿಶ್ರಾಂತ ಕುಲಪತಿಗಳಾದ ಪ್ರೊ. ಬಿ.ಎ. ವಿವೇಕ್ ರೈ ಅವರು ಮಾತನಾಡಿ ಕನ್ನಡ ಸಾಹಿತ್ಯದ, ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ 1970 ರ ದಶಕ ಬಹಳ ಮುಖ್ಯವಾದ ಕಾಲಘಟ್ಟ. ಮೊದಲು ನಾನು ಪ್ರಭಾವಿತಗೊಂಡದ್ದು ಶೂದ್ರ ಪತ್ರಿಕೆಯಲ್ಲಿ ಸಿದ್ಧಲಿಂಗಯ್ಯ ಕವಿತೆಯನ್ನು ಕಂಡಾಗ. ಸಿದ್ಧಲಿಂಗಯ್ಯನವರ 'ಗ್ರಾಮದೇವತೆಗಳು' ಸಂಶೋಧನಾ ಮಹಾಪ್ರಬಂಧದಿಂದ ನನ್ನ ಮತ್ತು ಅವರ ಸ್ನೇಹ ಬಹಳ ಗಾಢವಾಯಿತು. ಅವರು ವಿಧಾನ ಪರಿಷತ್ ಸದಸ್ಯರಾಗಿದ್ದಾಗ ನಾನು ಬೆಂಗಳೂರಿನಲ್ಲಿ ಅವರ ಜೊತೆಯಿದ್ದು ಕಂಡಂತಹದ್ದು ಪ್ರತಿನಿತ್ಯ ಅವರ ಮನೆಯ ಬಾಗಿಲು ಬಡಿಯುತ್ತಿದ್ದವರು ಬಡವರು, ದಲಿತರು. ಎಲ್ಲರ ಸಮಸ್ಯೆಗೆ ಸ್ಪಂದಿಸಿ ಸಹಕರಿಸುವ ಸಮಾಜಮುಖಿ ಮನೋಭಾವ ಅವರದ್ದಾಗಿತ್ತು.

ಅವರ ತಮಾಷೆಯ ಪ್ರಸಂಗಗಳು ಪ್ರಸಾರವಾದಷ್ಟು ಅವರು ಎರಡು ಅವಧಿಯಲ್ಲಿ ವಿಧಾನ ಪರಿಷತ್ತಿನಲ್ಲಿ ಮಾತನಾಡಿ ಕಾರ್ಯರೂಪಕ್ಕೆ ಬಂದ ಸಂಗತಿಗಳು ಹೆಚ್ಚು ಪ್ರಸಾರವಾಗದಿರುವುದು ದುರಂತ. ಹಾಸ್ಯಪ್ರಜ್ಞೆ ಮಾತ್ರವಲ್ಲ, ಮಗುವಿನ ತುಂಟಾಟ, ಪ್ರೀತಿ, ಸೃಜನಶೀಲತೆ ಅವರ ವ್ಯಕ್ತಿತ್ವದಲ್ಲಿತ್ತು. ಅವರ ಅಭಿಪ್ರಾಯಗಳಲ್ಲಿ ಸ್ಪಷ್ಟತೆಯಿತ್ತು. ವಯಸ್ಸಿನಲ್ಲಿ ಹಿರಿಯವನಾದರೂ ಅವರಿಂದ ನಾನು ಕಲಿತಿರುವುದು ಬಹಳ. ವೈಚಾರಿಕತೆಯು ಮನುಷ್ಯರ ಪ್ರೀತಿಯಿಂದ ಹೊರಗೆ ನಿಂತರೆ ಅದಕ್ಕೆ ಬೆಲೆ ಇರುವುದಿಲ್ಲ. ಈ ನೆಲೆಯಲ್ಲಿ ವೈಚಾರಿಕತೆ ಹಾಗೂ ಸಾಮಾಜಿಕ ವಿಸ್ತರಣೆಯಲ್ಲಿ ಸಿದ್ಧಲಿಂಗಯ್ಯ ಅವರು ಬಹಳ ಮುಖ್ಯವೆನಿಸುತ್ತಾರೆ. ಸಿದ್ಧಲಿಂಗಯ್ಯನವರ ಕೃತಿಗಳ ಪ್ರಭಾವ ಇಲ್ಲದಿದ್ದರೆ ಬಂಡಾಯ ಸಾಹಿತ್ಯ ಹುಟ್ಟುತ್ತಿರಲಿಲ್ಲ ಮತ್ತು ಹಿರಿಯರುಗಳು ತಮ್ಮ ಆಲೋಚನಾ ಕ್ರಮವನ್ನು, ಸಾಹಿತ್ಯ ಬರೆಯುವ ಕ್ರಮವನ್ನು ಬದಲಾಯಿಸಿಕೊಳ್ಳುತ್ತಿರಲಿಲ್ಲ ಎನ್ನುವ ಮಾತುಗಳೊಂದಿಗೆ ತಮ್ಮ ನುಡಿನಮನವನ್ನು ಅರ್ಪಿಸಿದರು.

ಕವಿ ಸಿದ್ಧಲಿಂಗಯ್ಯನವರು ಮಕ್ಕಳ ಸಾಹಿತ್ಯದ ಕುರಿತು ಅಪಾರ ಒಲವು, ಮಕ್ಕಳ ಸಾಹಿತ್ಯ ಪರಿಷತ್ತಿನ ಜೊತೆ ಅನೋನ್ಯತೆಯ ಬಾಂಧವ್ಯ ಹೊಂದಿದ್ದು ಹಾಗೂ ಪರಿಷತ್ತಿನ ಗೌರವಾನ್ವಿತ ಸಲಹೆಗಾರರಾಗಿದ್ದು ಕಳೆದ ಎರಡು ವರ್ಷದ ಹಿಂದೆ ಹಾಸನದಲ್ಲಿ ನಡೆದ ಅಖಿಲ ಭಾರತ ಮಕ್ಕಳ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಕ್ಕಳ ಸಾಹಿತ್ಯ ಪ್ರತಿಭೆಯನ್ನು ಮೆಚ್ಚಿ ಕಣ್ತುಂಬಿಕೊಂಡವರು. ಹಾಗೆಯೇ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಂಸ್ಥೆಯ 'ಅಭಿವ್ಯಕ್ತ' ಸಂಚಿಕೆಯಲ್ಲಿ ಮಕ್ಕಳ ಕನ್ನಡ ಕವಿತೆಗಳನ್ನು ಕಂಡು ಓದಿ 'ಇದು ನಮ್ಮ ಮಕ್ಕಳೇ ಬರೆದಿರುವುದೇ!' ಎಂದು ಮೆಚ್ಚಿ ನುಡಿದವರು.

"ಒಂದು ಭಾಷೆಯ ಉಳಿವಿನ ಪ್ರಶ್ನೆಯು ಮಕ್ಕಳ ಓದಿನ ಮೇಲೆ ನಿಂತಿರುತ್ತದೆ. ಅವರಿಗೆ ಸಣ್ಣ ವಯಸ್ಸಿನಲ್ಲಿಯೇ ಓದಿನ ಅಭಿರುಚಿ ಬೆಳೆಸಬೇಕು. ಅದಕ್ಕಾಗಿ ಅವರಿಗೆ ಇಷ್ಟವಾಗುವ ಸಾಹಿತ್ಯ ರಚನೆ ಆಗಬೇಕು. ಮಕ್ಕಳಿಗೆ ಕವಿತೆ, ನಾಟಕ, ಕಾದಂಬರಿ


ಡಾ. ಪುರುಷೋತ್ತಮ ಬಿಳಿಮಲೆ


ಪ್ರೊ. ಬಿ.ಎ. ವಿವೇಕ್ ರೈ

ಸೇರಿದಂತೆ ಎಲ್ಲ ಪ್ರಕಾರದ ಸಾಹಿತ್ಯವನ್ನೂ ಓದಿಸಬೇಕು. ಈ ಮೂಲಕ ಮಕ್ಕಳನ್ನು ಸಾಹಿತ್ಯ ಲೋಕಕ್ಕೆ ಸೆಳೆಯಬೇಕು. ನಂತರದ ಹಂತದಲ್ಲಿ ಮಕ್ಕಳ ಮನಸ್ಸನ್ನು ತಣಿಸಿ, ಆಸಕ್ತಿ ಕೆರಳಿಸಿ, ಕಲ್ಪನೆಯನ್ನು ವಿಸ್ತರಿಸುವ ಪುಟ್ಟ ಕಥೆಗಳನ್ನು ದೃಶ್ಯವಾಗಿ ಕಟ್ಟಿಕೊಡುವ ನಾಟಕಗಳ ಮೂಲಕ ಅವರ ಸಾಹಿತ್ಯ ಲೋಕದಲ್ಲಿಯೇ ಉಳಿಯುವಂತೆ ಮಾಡಬೇಕಾಗಿದೆ. ಮಕ್ಕಳಿಗೆ ಓದಿನ ಆಸಕ್ತಿಯನ್ನು ಹೆಚ್ಚಿಸುವ ಯಾವುದೇ ಪುಸ್ತಕವನ್ನು ಅವರಿಗೆ ನೀಡಬೇಕು. ಆ ಮೂಲಕ ಅವರಲ್ಲಿ ಹವ್ಯಾಸ ಬೆಳೆಸಬೇಕು. ಒಮ್ಮೆ ಓದು ಆರಂಭವಾದರೆ ಅದು ಹವ್ಯಾಸವಾಗಿ ಮಾರ್ಪಡುತ್ತದೆ. ಮಕ್ಕಳನ್ನು ಪುಸ್ತಕ ಮಳಿಗೆಗೆ ಕರೆದುಕೊಂಡು ಹೋಗಬೇಕು. ಅಲ್ಲಿ ಅವರಿಗೆ ಆವ ಪುಸ್ತಕ ಇಷ್ಟವಾಗುತ್ತದೆ ಎಂದು ತಿಳಿದುಕೊಂಡು ಅದನ್ನು ಗಿಫ್ಟ್ ಆಗಿ ಕೊಡುವಂತಹ ಪದ್ಧತಿ ಪೋಷಕರು ರೂಢಿಸಿಕೊಳ್ಳಬೇಕು" ಎಂಬುವುದು ಮಕ್ಕಳ ಸಾಹಿತ್ಯದ ಕುರಿತು ಕವಿ ಸಿದ್ಧಲಿಂಗಯ್ಯ ಅವರ ನಿಲುವಾಗಿತ್ತು.

ಕಾರ್ಯಕ್ರಮದಲ್ಲಿ ಕವಿ ಸಿದ್ಧಲಿಂಗಯ್ಯ ಅವರ 'ಮಾತಿಗೆ ಮಾತು ಕೊಟ್ಟವನ' ಕವಿತೆಯನ್ನು ಶಾಸ್ತ್ರೀಯ ಸಂಗೀತಗಾರರಾದ ಕು। ಪೂರ್ಣಿಮ ಅಡಿಗ ಅವರು ಹಾಗೂ 'ಆಕಾಶವ ಎತ್ತಿ ನಿಲಿಸಿ' ಕವಿತೆಯನ್ನು ಯುವ ಪ್ರತಿಭೆ ಕು। ಅಭಿಷೇಕ್ ಉಭಾಳೆ ಅವರು ಹಾಡಿನ ಮೂಲಕ ಕವಿಗೆ ಗೀತ ನಮನವನ್ನು ಸಲ್ಲಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಪರಿಷತ್ತಿನ ಅಧ್ಯಕ್ಷ ಅರವಿಂದ ಬಿಜ್ಜೈ ಮಕ್ಕಳ ಸಾಹಿತ್ಯ ಪರಿಷತ್ತು ದೆಹಲಿ ಘಟಕದ ವತಿಯಿಂದ ಅಗಲಿದ ಕವಿ ಸಿದ್ಧಲಿಂಗಯ್ಯ ಅವರಿಗೆ ನಮನಗಳನ್ನು ಸಲ್ಲಿಸಿದರು. ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ಸಂಚಾಕ, ಪತ್ರಕರ್ತ ಎ.ಎಲ್. ನಾಗೇಶ್, ಪರಿಷತ್ತಿನ ಗೌರವಾಧ್ಯಕ್ಷ ಪಿ. ಜಯರಾಜ್, ವಿದ್ವಾಂಸರು, ಉಪನ್ಯಾಸಕರು, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಸಾಹಿತ್ಯಾಸಕ್ತರು ಉಪಸ್ಥಿತರಿದ್ದರು. ಪರಿಷತ್ತಿನ ಸಂಚಾಲಕ ಕೃಷ್ಣರಾಜ್ ಸ್ವಾಗತಿಸಿದರು. ಸಂಘಟನಾ ಕಾರ್ಯದರ್ಶಿ ಯಲ್ಲಾಲಿಂಗ ಕೊಪ್ಪದ ವಂದಿಸಿದರು. ಪರಿಷತ್ತಿನ ಕೇಂದ್ರ ಘಟಕದ ನಿರ್ದೇಶಕ ಅರುಣ್ ಅವರು ಕಾರ್ಯಕ್ರಮ ನಿರೂಪಿಸಿದರು.

***ಅರವಿಂದ ಬಿಜ್ಜೈ***

# ‘ವೇದಿಕೆಯಲ್ಲಿ ನೆರಳು ಬೆಳಕು’ ಕುರಿತ ಸಂವಾದ

ರಂಗಭೂಮಿ ಎಂದಾಗ ನೆನಪಾಗುವುದು ಸಾಮಾನ್ಯವಾಗಿ ನಟ, ನಟಿ, ನಿರ್ದೇಶಕ, ಹಿನ್ನೆಲೆ ಸಂಗೀತಗಾರರು, ಪ್ರೇಕ್ಷಕರು, ಪರದೆ ಇತ್ಯಾದಿ. ರಂಗಸಜ್ಜಿಕೆ ಸುಂದರವಾಗಿ ಕಾಣಲು, ನಾಟಕದ ದೃಶ್ಯ ಪ್ರೇಕ್ಷಕರ ಮನಮುಟ್ಟಬೇಕಾದರೆ ನಾಟಕವು ಬೆಳಕಿನ ಕೊಂಡಿಯಾದಾಗ ಮಾತ್ರ ಸಾಧ್ಯ. ರಂಗಭೂಮಿಯಲ್ಲಿ ಬೆಳಕಿಗೆ ತನ್ನದೇ ಆದ ಮಹತ್ವವಿದೆ. ಬೆಳಕು ನಿರ್ವಹಣೆ ಮೇಲ್ನೋಟಕ್ಕೆ ಸಾಮಾನ್ಯ ಎಂದು ತೋಚಿದರೂ ಅದರದ್ದೇ ಮಹತ್ವವು ಬೆಳಕು ನಿರ್ವಹಣೆ ಮಾಡುವ ತಂತ್ರಜ್ಞರಿಗೆ ತಿಳಿದಿರುವಂತಹ ಸಂಗತಿ. ಕುಶಲಮತಿಯಾಗಿ ಮುಂದಾಲೋಚನೆ ಹಾಗೂ ಪರಿಶ್ರಮದ ಮೂಲಕ ಯಾವುದೇ ಸನ್ನಿವೇಶ ಪ್ರೇಕ್ಷಕನ ಮನದಾಳಕ್ಕೆ ಮುಟ್ಟಲು ಬೆಳಕಿನ ಸಂಯೋಜನೆ ಸಹಕಾರಿ. ಇದೊಂದು ವಿಶಿಷ್ಟ ಹಾಗೂ ಸೃಜನಾತ್ಮಕ ಕಲೆಯೂ ಕೂಡ.

ಸುಮಾರು 47 ವರ್ಷಗಳವರೆಗೆ ಇಡೀ ಜೀವನವನ್ನು ಬೆಳಕು ನಿರ್ವಹಣೆ ಹಾಗೂ ಸಂಯೋಜನೆಗೆ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಹಿರಿಯ ರಂಗಕರ್ಮಿ ಯೋಗೇಂದ್ರ ಸಿಂಗ್ ಅವರು. ಹಲವು ನಾಟಕಗಳನ್ನು ಪರಿಣಾಮಕಾರಿಯಾಗಿ ಯಶಸ್ವಿಗೊಳ್ಳುವಂತಾಗಲು ಈ ಬೆಳಕು ಸಂಯೋಜಗಾರನ ಕೈಚಳಕ ಅದ್ಭುತ.

ದಿನಾಂಕ 11.04.2021 ರಂದು ನವದೆಹಲಿಯ ‘ದಿನಕರ’ ಫೌಂಡೇಷನ್ ಇವರು ಜೂಮ್ ಮೀಟಿಂಗ್ ಮೂಲಕ ಹಮ್ಮಿಕೊಂಡಿದ್ದ ‘ವೇದಿಕೆಯಲ್ಲಿ ನೆರಳು-ಬೆಳಕು’ ವಿಷಯದ ಮೇಲಿನ ಸಂವಾದ ಕಾರ್ಯಕ್ರಮದಲ್ಲಿ ಸಂಪನ್ಮೂಲ ಅತಿಥಿಯಾಗಿ ಭಾಗವಹಿಸಿ ಅವರು ತಮ್ಮ ರಂಗಭೂಮಿಯ ಸುಮಾರು ಐದು ದಶಕಗಳ ಅನುಭವವನ್ನು ಹಂಚಿಕೊಂಡರು.


ಯೋಗೇಂದ್ರ ಸಿಂಗ್ ಅವರು ವಿಜಯಪುರದ ನಿವಾಸಿ. ನಾಟಕ ನೋಡುವ ಗೀಳು ಹಚ್ಚಿಕೊಂಡು ನಾಟಕದಲ್ಲಿನ ಬೆಳಕು ಸಂಯೋಜನೆಗೆ ಮಾರುಹೋದ ಇವರು, ರಂಗ ಬೆಳಕಿನ ಸಂಯೋಜಕರಾಗಿ 1957ರಲ್ಲಿ ರಂಗಭೂಮಿ ಪ್ರವೇಶಿಸಿದರು. ವಿಜಯಪುರದ ಕಲಾ ಮಾಧ್ಯಮ ತಂಡದ ಜೊತೆಗೆ ಬೆಸೆದುಕೊಂಡು ಕಾರ್ಯ ನಿರ್ವಹಿಸಿದ್ದಾರೆ. ಅಶೋಕ ಬಾದರದಿನ್ನಿ ಹಾಗೂ ಶ್ರೀನಿವಾಸ ತಾವರಗೇರಿ ತಮ್ಮ ಗುರುಗಳು ಎಂದ ಅವರು, ಈ ಮಹನೀಯರು ನನ್ನ ಕಲೆಗೆ ಪೂರಕವಾಗಿ ನೀಡಿದ ಪ್ರೋತ್ಸಾಹ ಅಪಾರ ಎಂದು ಬಣ್ಣಿಸಿದರು. ಈ ಕ್ಷೇತ್ರಕ್ಕೆ ಬಂದಿದ್ದು ಆಕಸ್ಮಿಕ. ಅಶೋಕ ಬಾದರದಿನ್ನಿ ಹಾಗೂ ಶ್ರೀನಿವಾಸ ತಾವರಗೇರಿ ಅವರು ನಾಟಕಗಳಿಗೆ ಓರ್ವ ಬೆಳಕು ನಿರ್ವಹಣೆಗಾರರ ಹುಡುಕಾಟದಲ್ಲಿದ್ದರು. ಧನಂಜಯ ಜಾಗೀರದಾರ ಅವರ ಮೂಲಕ ನನಗೆ ಬರ ಹೇಳಿದರು. ಅಲ್ಲಿಗೆ ತೆರಳಿದ ನಾನು ಅವರು ಹೇಳಿದ, ಕಲಿಸಿದ ಕಲಿಕಾ ಸೂತ್ರ ಹಿಡಿದು ಹದಿನೈದು ದಿವಸದ ನಾಟಕ ತಾಲೀಮಿಗೆ ಹಾಜರಾಗಿ ಬೆಳಕಿನ ವಿಷಯ ಮನದಟ್ಟು ಮಾಡಿಕೊಂಡೆ ಎಂದ ಅವರು, ಅಶೋಕ ಬಾದರದಿನ್ನಿ ಅವರ ನಿರ್ದೇಶನದ ‘ವಿದೂಷಕ’ ಹಾಗೂ ಶ್ರೀನಿವಾಸ ತಾವರಗೇರಿ ಅವರ ‘ಮನೆ’ ನಾಟಕಗಳಿಗೆ ಬೆಳಕು ಸಂಯೋಜನೆ ಮಾಡಿದೆ.ಈ ನಾಟಕಗಳು ವೃತ್ತಿ ಬದುಕಿನ ಪ್ರಥಮಗಳಾದವು ಎಂದರು.

ಬೆಳಕಿನ ಪರಿಕರಗಳು ಇಲ್ಲದ ಆ ಕಾಲದಲ್ಲೂ, ಲಭ್ಯ ಇದ್ದ ಸಂಪನ್ಮೂಲ ಬಳಸಿ, ಅತ್ಯಾಕರ್ಷಕವಾಗಿ ಬೆಳಕು ಸಂಯೋಜನೆ ನಿರ್ವಹಿಸಲಾಗುತ್ತಿತ್ತು. ಅನೇಕ ನಾಟಕ ತಂಡಗಳಲ್ಲಿ ಬಳಕೆಯಾಗುತ್ತಿದ್ದ ಪರಿಕರ ಗಮನಿಸಿ ವೃತ್ತಿಯಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನಗಳಾಗುತ್ತಿತ್ತು. ಮುಂಬೈಯಿಂದ ಬೆಳಕಿನ ಸಾಧನ-ಪರಿಕರಗಳನ್ನು ತರಿಸಲಾಗುತ್ತಿತ್ತು. ಈವರೆಗೆ ಸುಮಾರು ಎರಡು ಸಾವಿರಕ್ಕೂ ಹೆಚ್ಚು ನಾಟಕಗಳಿಗೆ ಬೆಳಕಿನ ಸಂಯೋಜನೆ ಮಾಡಿದ ಗರಿ ಇವರ ಮುಡಿ ಏರಿದೆ. ವರ್ಷದುದ್ದಕ್ಕೂ ನಾಟಕ ಪ್ರದರ್ಶನ ನಡಯದೇ ಇದ್ದ ಸಂದರ್ಭದಲ್ಲಿ ಅಜ್ಜಂಪುರದಲ್ಲಿ ಕೆಲ ವರ್ಷಗಳವರೆಗೆ ಆಟೋ ಓಡಿಸುವ ಕೆಲಸ ವು ನಿರ್ವಹಿಸುತ್ತಿದ್ದೆ ಎಂದು ಹೇಳಿದರು.

ಬಿ.ವಿ. ಕಾರಂತ್, ಪ್ರೇಮಾ ಕಾರಂತ್, ಶ್ರೀನಿವಾಸ ತಾವರಗೇರಿ, ಅಶೋಕ ಬಾದರದಿನ್ನಿ ಹಾಗೂ ಖ್ಯಾತನಾಮ ನಿರ್ದೇಶಕರೊಂದಿಗೆ ಕಾರ್ಯ ನಿರ್ವಹಿಸಿದ್ದು, ಅವರ ನಿರ್ದೇಶನದ ನಾಟಕಗಳೂ ಒಳಗೊಂಡಂತೆ, ಅನೇಕ ಕಂಪನಿ ನಾಟಕಗಳಿಗೂ ಸಹ ಧ್ವನಿ ಹಾಗೂ ಬೆಳಕು ಸಂಯೋಜನೆ ಮಾಡಿದ್ದನ್ನು ನೆನಪಿಸಿಕೊಂಡರು. ಇಲಕಲ್ಲದ ಸ್ನೇಹರಂಗ, ದೆಹಲಿ ದಿನಕರ ತಂಡಗಳಿಗೆ ಬೆಳಕಿನ ಸಂಯೋಜನೆ ಮಾಡಿದ ತೃಪ್ತಿ ಇದೆ ಎಂದರು.

ನವರಸಪುರ ಉತ್ಸವ ಹಾಗೂ ಪಟ್ಟದಕಲ್ಲ ಉತ್ಸವದಲ್ಲಿ ಬೆಳಕು ಸಂಯೋಜನೆ ಮಾಡಿದ್ದು, ಹಂಪಿ ಉತ್ಸವ, ಬಾಗಲಕೋಟದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಬೆಳಗಾವಿ ಹಾಗೂ ವಿಜಯಪುರದಲ್ಲಿ ನಡೆದ ಡಾ. ರಾಜಕುಮಾರ್ ಸಂಗೀತ ನೈಟ್ಸ್ ಕಾರ್ಯಕ್ರಮಗಳಿಗೂ ಬೆಳಕು ಸಂಯೋಜನೆ ನಿರ್ವಹಣೆಯ ಹೆಮ್ಮೆ ಇದೆ ಎಂದರು.

ವಿದ್ಯುತ್ ಜೊತೆಗೆ ಬೆಳಕಿನ ಸಂಯೋಜನೆಯಲ್ಲಿ ಮುನ್ನೆಚ್ಚರಿಕೆಯಿಂದ ಇರಬೇಕಾಗುತ್ತದೆ. ಬಾಗಲಕೋಟೆಯಲ್ಲಿ ನಡೆದ ನಾಟಕೋತ್ಸವದಲ್ಲಿ ಪರದೆಗೆ ಬೆಂಕಿ ಬಿದ್ದರೂ, ಲೈಟ್ ತೆಗೆಯದೇ ಹೊತ್ತಿದ್ದ ಬೆಂಕಿ ನಂದಿಸಿದ ಘಟನೆಯೂ ಸೇರಿದಂತೆ, ಇಂಥ ಹಲವು ಯಶೋಗಾಥೆ ಬಿಚ್ಚಿಟ್ಟರು. ವೃತ್ತಿಯಲ್ಲಿ ಇಂತಹ ಅವಘಡ ಸಹಜ. ಆ ಸಮಸ್ಯೆ ಸವಾಲಾಗಿ ಸ್ವೀಕರಿಸಿದಾಗ ಕಾರ್ಯ ಸಂತೃಪ್ತಿ ಲಭಿಸುತ್ತದೆ.



ರಂಗಕರ್ಮಿ ಯೋಗೇಂದ್ರ ಸಿಂಗ್

ಅಜ್ಜಂಪುರದಲ್ಲಿದ್ದ ಸಂದರ್ಭ ಜಿ.ಎನ್. ದೇಶಪಾಂಡೆ ಹಾಗೂ ಮಹಾಂತೇಶ ಗಜೇಂದ್ರಗಡ್ ಅವರು ತಮ್ಮನ್ನು ಮತ್ತೆ ಕರೆತಂದು ವಿಜಯಪುರದ ಕಂದಗಲ್ ಹಣಮಂತರಾಯರ ರಂಗಮಂದಿರದಲ್ಲಿ ಕಲಾ ಸೇವೆ ಮಾಡುವ ಅವಕಾಶ ನೀಡಿದರು. 69ರ ಇಳಿ ವಯಸ್ಸಿನಲ್ಲೂ ಕ್ರಿಯಾಶೀಲತೆಯಿಂದ ತೊಡಗಿಕೊಂಡಿರುವುದು ಖುಷಿ ಕೊಟ್ಟಿದೆ ಎಂದರು.

ಚಿಕ್ಕಂದಿನಿಂದಲೂ ಚಿತ್ರಕಲೆ ಸೇರಿದಂತೆ ಸೃಜನಾತ್ಮಕ ಕಲೆಗಳ ಕಡೆ ಒಲವಿತ್ತು. ಅನುಪಯುಕ್ತ ವಸ್ತುಗಳಿಗೆ ಮೂರ್ತ ರೂಪ ಕೊಡುವ ಕಲೆಯೂ ಕರಗತ ಮಾಡಿಕೊಂಡು ಹಲವು ನಾಟಕಗಳಿಗೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವಸ್ತ್ರ ವಿನ್ಯಾಸ, ರಂಗ ಪರಿಕರ, ಪ್ರಸಾದನ ಇತ್ಯಾದಿ ದಣಿವರಿಯದ ನಿರಂತರ ವೃತ್ತಿ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದು ರೂಢಿಯಾಗಿದೆ. ನಟನೆ, ಪ್ರಸಾದನಾ, ರಂಗ ಸಜ್ಜಿಕೆ ಎಲ್ಲಾ ಕ್ಷೇತ್ರಗಳಲ್ಲಿ ಕಾರ್ಯ ಮಾಡಿದ ತೃಪ್ತಿ ತಮಗಿದೆ ಎಂದರು.

ಈ ಸಾಧಕನ ಸಾಧನೆ ಗುರುತಿಸಿ 1993ರಲ್ಲಿ ನಾಟಕ ಅಕಾಡೆಮಿಯು ಪ್ರಶಸ್ತಿ ನೀಡಿದೆ. ಹುನಗುಂದ ಧ್ರುವರಂಗ ಧ್ರುವ ಪ್ರಶಸ್ತಿ, ವೃತ್ತಿ ರಂಗಭೂಮಿಯಿಂದ ಎಲ್.ಬಿ. ಶೇಕ್ ಮಾಸ್ತರ ಅವರು ಸನ್ಮಾನದ ಗೌರವ ನೀಡಿದ್ದಾರೆ. ವಿಜಯಪುರದ ಕಲಾ ಮಾಧ್ಯಮ ಸನ್ಮಾನ ಮಾಡಿ ಸತ್ಕರಿಸಿದ್ದಾರೆ. ಪಟ್ಟದಕಲ್ಲ ಉತ್ಸವ ಸಂದರ್ಭ ಜಿಲ್ಲಾಧಿಕಾರಿಗಳಿಂದ ಸನ್ಮಾನದ ಗೌರವ ದೊರೆತಿದೆ ಇನ್ನೂ ಅನೇಕ ಸಂಘ ಸಂಸ್ಥೆಗಳು ಕರೆದು ಸನ್ಮಾನಿಸಿ ಗೌರವ ನೀಡಿವೆ ಎಂದರು.

ಈ ಕ್ಷೇತ್ರಕ್ಕೆ ಬರುವ ಯುವಕರಿಗೆ ಕೆಲಸ ಕುರಿತಾಗಿ ಪ್ರೀತಿ ಇರಬೇಕು. ನಿಷ್ಠೆ, ಸಮಯ ಪ್ರಜ್ಞೆ, ಕಠಿಣ ಪರಿಶ್ರಮ ಹಾಗೂ ಬದ್ಧತೆ ಇರಬೇಕೆಂದು ಕಿವಿಮಾತು ಹೇಳಿದರು.

ದೆಹಲಿಯ ಹಿರಿಯ ರಂಗಕರ್ಮಿ ಶಿವಾನಂದ ಇಂಗಳೇಶ್ವರ ಅವರ ನಿರ್ದೇಶನದ ದೆಹಲಿಯಲ್ಲಿ ಹಾಗೂ ರಾಜ್ಯದಲ್ಲಿ ನಡೆದ ಹಲವಾರು ನಾಟಕಗಳಿಗೆ ಬೆಳಕು ನೀಡಿದ್ದು ಖುಷಿ ಇದೆ. ಶಿವಾನಂದ ಇಂಗಳೇಶ್ವರ ಹಾಗೂ ಕಲಾ ಮಾಧ್ಯಮದ ಒಡನಾಟದ ಹಿನ್ನೆಲೆ ನೆನಪು ಮಾಡಿಕೊಂಡರು.

ಕುವೆಂಪು ವಿಶ್ವವಿದ್ಯಾಲಯದ ಕುಲಸಚಿವ ಡಾ. ಸಂಗನಗೌಡ ಎಸ್. ಪಾಟೀಲ್ ಅವರು ರಂಗಗೀತೆಗಳನ್ನು ಸುಮಧುರವಾಗಿ ಹಾಡಿದರು. ಉಪನ್ಯಾಸಕ ಸುಭಾಸಚಂದ್ರ ಎಸ್. ಕನ್ನೂರ ಅವರು ಸಕಾಲಿಕ ಪ್ರಶ್ನೆಗಳನ್ನು ಕೇಳಿದರು.ಕೃಷ್ಣರಾಜ ಅವರು ಕಾರ್ಯಕ್ರಮ ನಿರೂಪಿಸಿದರು. ತಂತ್ರಜ್ಞಾನದ ಮೂಲಕ ಕಾರ್ಯಕ್ರಮ ಯಶಸ್ವಿಗೆ ಕಾರಣೀಕರ್ತರಾದವರು ರಮೇಶ್ ಟಿ.ಎಸ್. ಅವರು. 'ದಿನಕರ'ದ ಸಂಯೋಜಕ ಮತ್ತು ಸಂಚಾಲಕರೂ ಆದ ಹಿರಿಯ ರಂಗಕರ್ಮಿ ಶಿವಾನಂದ ಇಂಗಳೇಶ್ವರ ಅವರು ಕಾರ್ಯಕ್ರಮ ರೂಪು-ರೇಷೆ ಸಿದ್ಧಪಡಿಸಿ, ಅಚ್ಚುಕಟ್ಟಾಗಿ ಮೂಡಿ ಬರಲು ಶ್ರಮ ವಹಿಸಿದರು. ಸಂತೋಷ ಉಪಾಧ್ಯಾಯ ಮಾತನಾಡಿದರು. ಅಮರೇಶ ಅವರು ನಿರ್ವಹಣೆ ಮಾಡಿ ವಂದಿಸಿದರು.

# ಬದ್ಧತೆಯುಳ್ಳ ಕಲಾವಿದ ಯೋಗೇಂದ್ರ ಸಿಂಗ್

## -ಡಾ. ಸಂಗನಗೌಡ ಎಸ್. ಪಾಟೀಲ್



ಡಾ. ಸಂಗನಗೌಡ ಎಸ್. ಪಾಟೀಲ್

ಕುವೆಂಪು ವಿಶ್ವವಿದ್ಯಾಲಯದ ಕುಲಸಚಿವ ಡಾ. ಸಂಗನಗೌಡ ಎಸ್. ಪಾಟೀಲ್ ಅವರು 'ವೇದಿಕೆಯಲ್ಲಿ ನೆರಳು ಮತ್ತು ಬೆಳಕು' ಸಂವಾದದಲ್ಲಿ ಮಾತನಾಡಿ, ಕಲಾ ಮಾಧ್ಯಮ ಅದರೊಂದಿಗಿನ ತಮ್ಮ ರಂಗಭೂಮಿ ಕುರಿತು ನೆನಪಿನ ಬುತ್ತಿ ಬಿಚ್ಚಿದರು. ತಾವು 35 ವರ್ಷಗಳ ನಂತರ ರಂಗಭೂಮಿ ಸಂವಾದ ಕಾರ್ಯಕ್ರಮ ಮೂಲಕ ಭೇಟಿಯಾಗುತ್ತಿರುವುದು ಸಂತಸ ತಂದಿದೆ. 1977ರಲ್ಲಿ ಜಿ.ಎನ್. ದೇಶಪಾಂಡೆ ನಿರ್ದೇಶನದ 'ಅಂಚೆ ಮನೆ' ಪ್ರಥಮ ನಾಟಕ. ಮುಂದೆ ಅಶೋಕ ಬಾದರದಿನ್ನಿ ಅವರ ನಿರ್ದೇಶನದ 'ಅಪ್ಪ' ನಾಟಕದಲ್ಲಿ 'ಸಣ್ಣ ಬಸ್ಸು' ಪಾತ್ರ ನಿರ್ವಹಣೆ ಈ ನಾಟಕಕ್ಕೆ ಯೋಗೇಂದ್ರ ಸಿಂಗ್ ಅವರು ಬೆಳಕಿನ ಸಂಯೋಜನೆ ಇತ್ತು. ನಾಟಕದ ಕಥೆ, ಕಲಾವಿದ, ನಿರ್ದೇಶಕ, ರಂಗ ವಿನ್ಯಾಸಕಾರರ ಜೊತೆಗೆ ಅವಿಭಾಜ್ಯ ಅಂಗವಾಗಿ ತಮ್ಮನ್ನು ತಾವು ಗುರುತಿಸಿಕೊಳ್ಳುತ್ತಿದ್ದರು. ಪಾತ್ರಧಾರಿಗಳಿಗಿಂತ ನಿರ್ದೇಶಕನ ಸ್ಥಾನಮಾನ ಸಿಂಗ್ ಅವರಿಗೆ ದೊರೆಯುತ್ತಿತ್ತು. ಬೆಳಕಿನ ಆಧುನಿಕ ಸಾಧನಗಳು ಇರದೇ ಇದ್ದಾಗಲೂ ಅದ್ಭುತವಾಗಿ ಬೆಳಕಿನ ಸಂಯೋಜನೆ ಮಾಡುತ್ತಿದ್ದರು. ಒಂದು ನಾಟಕದ ಕಥೆಗೆ, ನಿರ್ದೇಶನಕ್ಕೆ ಪ್ರೇಕ್ಷಕರ ಸನ್ಮಾನದ ಚಪ್ಪಾಳೆಗಳು ಸಿಂಗ್ ಅವರಿಗೂ ದೊರಕಿ ಹುರಿದುಂಬಿಸುತ್ತಿದ್ದರು

'ದೊರೆ ಈಡಿಪಸ್' ನಾಟಕದಲ್ಲಿನ ಒಂದು ನೃತ್ಯಕ್ಕೆ ಸ್ಟ್ರೋಬ್ ಲೈಟ್ ಬಳಕೆ ಮಾಡಿದ್ದು, ಆ ದೃಶ್ಯಕ್ಕೆ ಐದು ನಿಮಿಷಗಳವರೆಗೆ ಸಭಾಂಗಣದಲ್ಲಿ ಮೊಳಗಿದ ಕರತಾಡನದ ಆ ಸಂದರ್ಭ ಕಣ್ಣಿಗೆ ಕಟ್ಟಿದಂತಿದೆ ಎಂದರು. ಆ ದೃಶ್ಯ ಮನಮೋಹಕವಾಗಿಸಲು ಇವರ ಸೃಜನಾತ್ಮಕತೆ ಪ್ರಯೋಗ ಇದೆ. 'ಅಪ್ಪ' ನಾಟಕದಲ್ಲಿ ಹೂವಿನ ದೃಶ್ಯ ಬೆಳಕಿನ ಮೂಲಕ ಅದ್ಭುತವಾಗಿ ಕಟ್ಟಿಕೊಟ್ಟಿದ್ದರು. ಈರುಳ್ಳಿ ಗೋಣಿ ಚೀಲ ತಟ್ಟು ಬಳಸಿ ರಂಗಪರಿಕರ ಸಿದ್ಧಪಡಿಸುತ್ತಿದ್ದರು. ಪ್ರೇಕ್ಷಕರಿಗೆ ದುಬಾರಿ ರಂಗಪರಿಕರ ಎನ್ನುವಷ್ಟರ ಮಟ್ಟಿಗೆ ಕೌಶಲ್ಯಯುಕ್ತವಾಗಿ ಸಿದ್ಧಪಡಿಸುತ್ತಿದ್ದರು. ಕಲೆಗೆ ಸಮರ್ಪಿತಗೊಳಿಸಿಕೊಂಡ ಹಾಗೂ ಬದ್ಧತೆಯುಳ್ಳ ಕಲಾವಿದ ಎಂದರು. ಕಲಾ ಮಾಧ್ಯಮ ಒಂದು ಕುಟುಂಬದಂತಿತ್ತು. ಶಿವಾನಂದ ಇಂಗಳೇಶ್ವರ ಅವರ ಬ್ಯಾಗಿನಲ್ಲಿ ಆಮಂತ್ರಣ ಪತ್ರಿಕೆ ಸದಾ ಇರುತ್ತಿದ್ದವು. ಇವರ ಬದ್ಧತೆ ಹಾಗೂ ಕಟ್ಟು ನಿಟ್ಟಿನ ನಿರ್ಣಯ, ಸಿಕ್ಕಾಪಟ್ಟೆ ಶಿಸ್ತು, ಸಮಯ ಪ್ರಜ್ಞೆ ವರ್ಣನಾತೀತ. ಸಿಂಗ್ ಅವರು ಬಹುಮುಖ ಪ್ರತಿಭೆ ಎಂದರು. ಸಿಂದಗಿಯ ಸಿನಿಮಾ ಥೇಟರ್ ಅನ್ನು ನಾಟಕದ ರಂಗ ಸ್ಥಳವಾಗಿ ಪರಿವರ್ತಿಸಿದ ಅವರ ಚಾಕಚಕ್ಯತೆಗೆ ಹಾಗೂ ಸೃಜನಶೀಲತೆಗೆ ಹಿಡಿದ ಕೈಗನ್ನಡಿ ಎಂದರು. ಬೆಳಕಿನಿಂದ ಬೆಳಕಿಗೆ ಬಂದ ಸಿಂಗ್ ಅವರನ್ನು ಮಗದೊಮ್ಮೆ ಬೆಳಕಿಗೆ ನಿಲ್ಲಿಸುವ ದೊಡ್ಡ ಕಾರ್ಯ ಎಂದು ಬಣ್ಣಿಸಿದರು.

***ಅಮರೇಶ***




ದೆಹಲಿ ಕರ್ನಾಟಕ ಸಂಘದ
ಸುಸಜ್ಜಿತವಾದ ಆರ್ಟ್ ಗ್ಯಾಲರಿ
ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.
ಹೆಚ್ಚಿನ ಮಾಹಿತಿಗಾಗಿ
ದೆಹಲಿ ಕರ್ನಾಟಕ ಸಂಘದ
ಕಾರ್ಯಾಲಯವನ್ನು ಸಂಪರ್ಕಿಸಿರಿ.
ದೂರವಾಣಿ :
011-26109615 / 26104818

# ನಾಟಕ ಬರಿಬೇಕು ಅಂದ್ರ, ಹೊಟ್ಟಿ ಉರಿಬೇಕು!

## - ಪ್ರೊ. ಜಿ. ಎಚ್. ಹನ್ನೆರಡುಮಠ



**ಪ್ರೊ. ಜಿ.ಎಚ್. ಹನ್ನೆರಡುಮಠ**

ಬರೆಯಬೇಕಂದ್ರ ನಾಟಕ ರಚನೆಯಾಗೋದು ಕಷ್ಟ, ಬರಿಬೇಕು ಅಂತ ಬರದ್ರ ನಾಟಕ ಸಪ್ಪೆ ಆಗ್ತದ, ನಾಟಕ ಬರಿಬೇಕಾದ್ರ ಹೊಟ್ಟಿ ಉರಿಬೇಕು, ನಾಟಕ ಬರೆಯುವ ಮುಂಚೆ ಸಂಕಟಾ ಆಗಬೇಕು. ಶಬ್ದಗಳು ಸಿಡಿದು ಬರ್ತಾವು, ಶಬ್ದಗಳು ಶಬ್ದಗಳಾಗಿರುವುದಿಲ್ಲ ಕಿಡಿಯಾಗಿರ್ತವ, ಸಾಮಾಜಿಕ ಸಂಕಟ ಬರಬೇಕು ಆಗ ನಾಟಕ ಖಡಕ್ ಆಗ್ತಾದ ಎಂದು ಕವಿ, ನಾಟಕಕಾರ, ಸಾಹಿತಿ ಪ್ರೊ. ಜಿ.ಎಚ್. ಹನ್ನೆರಡುಮಠ ಹೇಳಿದರು. ಅವರು ನವದೆಹಲಿಯ ದಿನಕರ ತಂಡ ದಿನಾಂಕ 13.06.2021 ರಂದು ಅಂತರ್ಜಾಲ ಮಾಧ್ಯಮದ ಮೂಲಕ ಹಮ್ಮಿಕೊಂಡಿದ್ದ "ರಂಗಭೂಮಿಯಲ್ಲಿ ಶರಣರ ಮೌಲ್ಯಗಳು" ವಿಷಯದ ಮೇಲೆ ಸಂವಾದದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು. ಅವರ ನರಗುಂದದ ರೈತ ಬಂಡಾಯದ 'ಬಂಡೆದ್ದ ಬಾರಕೋಲು', 'ಸ್ವಾಮಿಗೊಳ ಸ್ವಾಮಾರ', 'ಮಹಾತಪಸ್ವಿ', 'ಜಗದಂಬೆ' ಹಾಗೂ ಮಹಿಳಾ ಪರವಾದ 'ಮೌನ ಕೋಗಿಲೆ' ನಾಟಕಗಳು ರಾಜ್ಯದಾದ್ಯಂತ ಹೆಸರು ಮಾಡಿದವು.

ಧ್ರುವರಂಗದ ದೇಶಪಾಂಡೆ ಅವರ ನೇತೃತ್ವದಲ್ಲಿ 'ಸ್ವಾಮಿಗಳ ಸ್ವಾಮಾರ' ನಾಟಕ ಯಶಸ್ವಿ ಪ್ರದರ್ಶನ ಕಂಡಿತು. ಹಳ್ಳಿ-ಹಳ್ಳಿಗಳಲ್ಲಿ ಈ ನಾಟಕ ಪ್ರದರ್ಶನ ಕಂಡಿತು. ಭದ್ರಾವತಿಯ ಕಾಗದ ಕಾರ್ಖಾನೆಯ 'ಶ್ಯಾಮ ಮೂರ್ತಿ' ಅವರು 'ಸ್ವಾಮಿಗಳ ಸ್ವಾಮಾರ', 'ಬಂಡೆದ್ದ ಬಾರಕೋಲು' ಹಾಗೂ 'ಮೌನ ಕೋಗಿಲೆ' ನಾಟಕಗಳನ್ನು ಆಡಿಸಿದರು. ಉಡುಪಿಯ ನಾಟಕೋತ್ಸವದಲ್ಲಿ 'ಮೌನ ಕೋಗಿಲೆ' ನಾಟಕಕ್ಕೆ ಐದು ಪ್ರಶಸ್ತಿಗಳು ಸಂದವು. ಅಭಿಮಾನಿಗಳು ಹಾಗೂ ಸಂಘ-ಸಂಸ್ಥೆಗಳು ತಮ್ಮನ್ನು ಈ ಕಾಲಘಟ್ಟದಲ್ಲಿ ಗುರುತಿಸಿದವು ಎಂದರು. ಭದ್ರಾವತಿಯ ಬುಗಡೀಕರ್ ಅವರು 'ಮೌನ ಕೋಗಿಲೆ' ನಾಟಕ ಬೆಂಗಳೂರಿನಲ್ಲಿ ಯಶಸ್ವಿ ಪ್ರದರ್ಶನಕ್ಕೆ ಕಾರಣರಾದರು. ಇದರ ಜೊತೆಗೆ 'ಗೋಧಿ ಹುಗ್ಗಿ ಗಂಗಯ್ಯ' ಶೋಷಣೆಯ ಇನ್ನೊಂದು ಮುಖ. 'ಪೋಲಿಸ್'; 'ಕಬ್ಬಕ್ಕಿ ಕರದಾವ ಕವ್ವ.ಕವ್ವ' ಈ ನಾಟಕ 'ವಾರನಾರಿ ಕಾಮಲಾಯಿ'ಯ ಕುರಿತಾದದ್ದು, ಬದುಕಿನಲ್ಲಿ ಪರಿವರ್ತನೆ ಹೊಂದಿ, ಮಹಾನ್ ಶರಣೆಯಾದ ಪ್ರಸಂಗ ನಾಟಕದ ವಿಷಯವಸ್ತು ಎಂದರು.

**ಬಸವ ಪರಿಸರದ ಎಂಟು ಕಾದಂಬರಿಗಳು:**

'ಕೂಗಿತ್ತು ಕೂಡಲ ಸಂಗಮ', 'ಯೋಗಿ ಕಂಡ ಯೌವ್ವನ', 'ಗುರು ಮನೆಯಿಂದ ಅರಮನೆಗೆ', 'ಯೋಗಿಗೆ ಯೋಗಿಣಿಯಾಗಿ ಕಾಡಿತ್ತು', 'ಹರ ಹರ ಮಹಾದೇವ', 'ಮಹಾ ಕಲ್ಯಾಣ', 'ತೇರು ಸಾಗಿತಣ್ಣಾ', 'ಉಳವಿಯಲ್ಲಿ ಓಂಕಾರ', ಈ ಎಂಟು ಕೃತಿ ರಚನೆಯ ನಂತರ ಸಾವಿರಾರು ಪಾತ್ರಗಳು ಕಣ್ಣ ಮುಂದೆ ಸುಳಿದಾಡಿದವು. ಮೋಳಿಗೆ ಮಾರಯ್ಯ, ಬಹುರೂಪಿ ಚೌಡಯ್ಯನ ಪಾತ್ರ, ಅಪ್ಪಗಳ ಅಪ್ಪ ಅಪ್ಪಣ್ಣನ ಪಾತ್ರಗಳು ಕೂಡ.

**ಮಕ್ಕಳ ನಾಟಕದತ್ತ ಚಿತ್ತ:**

ಗಾಂಧೀಜಿಯ ಕುರಿತ 'ಶ್ರವಣಕುಮಾರ ಮತ್ತು ಗಾಂಧಿ', 'ನಾನು ಕಾಪೀ ಮಾಡಲಾರೆ', 'ಕಣ್ಣಂಚಿನಲ್ಲಿ ಮಿಂಚಿತ್ತು ಪಂಚಾರತಿ' ಸೇರಿದಂತೆ ಐದು ಮಕ್ಕಳ ನಾಟಕಗಳನ್ನು ಬೆಂಗಳೂರಿನ ಗಾಂಧಿ ಭವನದ ಒತ್ತಾಯ ಹಾಗೂ ಒತ್ತಾಸೆಯ ಮೇರೆಗೆ ರಚಿಸಿದ್ದು, ಸಿವಿಜಿ ಪ್ರಕಾಶನ ಪುಸ್ತಕಗಳನ್ನು ಪ್ರಕಟಿಸಿದೆ ಎಂದರು.

ಸಾಹಿತ್ಯ ಮತ್ತು ಯೋಗ ನನ್ನೊಂದಿಗೆ ಜೊತೆಯಾಗಿಯೇ ಇವೆ. ಕಾರಣ, ಹನ್ನೆರಡುಮಠ ಯೋಗ ಪರಂಪರೆಯ ಮಠ, ಶಂಕರಾಚಾರ್ಯರ ಮತ್ತು ಶರಣರ ಸಿದ್ಧಾಂತ ಮೇಳೈಸಿದ ಹನ್ನೆರಡು ಮಠ ಆಗಿತ್ತು. ಇದರ ಗಾಢವಾದ ಪ್ರಭಾವದಿಂದ ಸುಂದರವಾದ ಶಾಂತ ಪ್ರಶಾಂತವಾದ ಇಲಕಲ್ಲ ಮಠದ ತಪೋವನದಲ್ಲಿ ಮೂರು ತಿಂಗಳ ಮೌನದ ಮೂಲಕ 'ಚಿತ್ತರಗಿ ಚಿಜ್ಯೋತಿ' ಕೃತಿ ರಚನೆಯಾಯಿತು. ಈ ಕೃತಿಯನ್ನು ಸಿ.ವಿ. ಶಿವಶಂಕರ ಅವರು 'ಮಹಾ ತಪಸ್ವಿ' ಎಂಬ ಚಲನಚಿತ್ರ ಮಾಡಿದ್ದಾರೆ.

**ಇಲಕಲ್ಲ ರಂಗಭೂಮಿ ಹಾಗೂ ಸಾಹಿತ್ಯ ನಂಟು:**

ಶ್ರೀ ವಿಜಯ ಮಹಾಂತ ಕಲಾ-ವಿಜ್ಞಾನ-ವಾಣಿಜ್ಯ ಮಹಾವಿದ್ಯಾಲಯಕ್ಕೆ ಕನ್ನಡ ಪ್ರಾಧ್ಯಾಪಕರಾಗಿ ಸೇವೆ, ಇಲ್ಲಿಂದ ಕವನ ಸಂಕಲನಗಳು ಹಾಗೂ ಕಾದಂಬರಿ ರಚನೆಯ ಓಘ ಆರಂಭವಾಯಿತು. ಪ್ರಸಿದ್ಧ ನಾಟಕಕಾರಾದ ಪಿ.ಬಿ ಧುತ್ತರಗಿ ಅವರೊಂದಿಗೆ ನಾಟಕದ ಒಡನಾಟ ಮೆಲುಕು ಹಾಕಿದರು.

'ಯುಗ ಪುರುಷ' ಹಾನಗಲ್ ಕುಮಾರ ಶಿವಯೋಗಿಗಳನ್ನು ಕುರಿತು ರಚಿಸಿದ ಚಾರಿತ್ರಿಕ ನಾಟಕ. ಐವತ್ತು ನಿಮಿಷಕ್ಕೆ ಮಿತಿಗೊಳಿಸಿ, ವಿವಿಧ ಶರಣರ ಕುರಿತು ಬರೆದ ಶೂನ್ಯ ಸಂಪಾದನೆಯನ್ನು ಸಮಗ್ರವಾಗಿ ಪರಿಚಯಿಸುವ ಹದಿನಾರು ನಾಟಕಗಳ ಸಮಗ್ರ ಕೃತಿ : 'ಸಮಗ್ರ ಶೂನ್ಯ ಸಂಪಾದನೆ ನಾಟಕ' ಸಿವಿಜಿ ಪ್ರಕಾಶನ ಪ್ರಕಟಣೆ ಹೊಣೆ ಹೊತ್ತಿದ್ದು, ಲೋಕಾರ್ಪಣೆಗೆ ಸನ್ನಿಹಿತವಾಗಿದೆ ಎಂದರು. ಚಾಲೇಂಜ್ ಹಾಗೂ ಚೇಂಜ್ ಜೀವನದಲ್ಲಿ ತೆಗೆದುಕೊಳ್ಳಬೇಕು ಎಂದರು.

ಝುಗಮಗಿಸುವ ನಗರೀಕರಣದ ಭರಾಟೆಯಲ್ಲಿ ಸಮೃದ್ಧ ಸಂಸ್ಕೃತಿ, ಭಾಷೆ, ಆಹಾರ ಪದ್ಧತಿ ಮರೆಯದೇ ಅಳವಡಿಸಿಕೊಳ್ಳುವತ್ತ ಚಿಂತಿಸಬೇಕಿದೆ. ಹುಬ್ಬಳ್ಳಿಯ ಅವರ ಪರಿಸರದ ಸಮೃದ್ಧಿಯ ಪ್ರತೀಕ ಬಳುವಲ ಹಾಗೂ ಹುಣಸೇ ಮರ ಹನ್ನೆರಡುಮಠ ಅವರ ಜಾನಪದ ಜೀವನದ ಸೊಗಡಿನ ಮಾತಾಗಿತ್ತು.

**ವಿಮಾನದಲ್ಲಿ ಬಹುರೂಪಿ ಚೌಡಯ್ಯ!!**

ಬಹುರೂಪಿ ಚೌಡಯ್ಯ ಬರೆಯಬೇಕೆಂದು ಗೆಳೆಯರ ಮಹದಾಸೆ, ಕಾಲವೇ ಕೂಡಿ ಬರದೇ ವರುಷಗಳೇ ಕಳೆಯುತ್ತಿದ್ದವು. ಕುಟುಂಬದೊಂದಿಗೆ ಅಮೇರಿಕಾಕ್ಕೆ ಪ್ರವಾಸ ಹೋಗುವ ಸಂದರ್ಭ, ವಿಮಾನ ಪ್ರಯಾಣ ಯು.ಎ.ಇ.ಯಿಂದ ಅಮೇರಿಕೆಯ ಸ್ಯಾನ್ ಫ್ರಾನ್ಸಿಸ್ಕೊ ವಿಮಾನ ಏರಿ ಕುಳಿತಾಯಿತು. ವಿಮಾನದ ಪ್ರಯಾಣದ ಅವಧಿ ಹದಿನಾರು ಗಂಟೆ ಇಪ್ಪತ್ತು ನಿಮಿಷ. ನಾಲ್ವತ್ತು ನಾಲ್ಕು ಸಾವಿರ ಅಡಿಯಲ್ಲಿ ವಿಮಾನ ಹಾರಾಟ ನಡೆಸಿತ್ತು. ಪೆನ್ನು ಕಾಗದ ಕೈಯಲ್ಲಿತ್ತು, ಬರೆಯಲು ಶುರುವಾಯಿತು, ಗಗನಸಖಿಯರೇ ಬಹುರೂಪಿ ಚೌಡಯ್ಯ ನಾಟಕದ ಗೀತ ನರ್ತಕಿಯರಾಗಿ ಸೇರಿದರು. ಗಮ್ಯ ಸ್ಥಾನ ತಲುಪುವಷ್ಟರಲ್ಲಿಯೇ ನಾಟಕ ಸಿದ್ಧವಾಗಿತ್ತು ಎಂದು ತಮ್ಮ ವಿಮಾನ ಪ್ರಯಾಣದ ವೇಳೆ ನಾಟಕ ರಚಿಸಿದ ಯಶೋಗಾಥೆಯನ್ನು ಬಿಚ್ಚಿಟ್ಟರು.

**ಜೀವನ ಹಾಗೂ ರಂಗಾಸಕ್ತಿ:**

ಬಯಲಾಟಗಳ ಪ್ರದರ್ಶನವಿದ್ದರೆ ತಮಗೆ ದೊಡ್ಡ ಹಬ್ಬ! ನೋಡುವ ತವಕ, ಗೆಳೆಯ 'ಬಳಿಗಾರ ನಾಗು', ಅಭಿನಯದ ಶ್ರೀಕೃಷ್ಣ ಪಾತ್ರ ಅಚ್ಚುಮೆಚ್ಚು, 'ಗಿಣಿಮಾವ' ಪಾತ್ರ ಬಲು ಸಂತೋಷ ತಂದಿದೆ. ಆಗಿನ ಬಯಲಾಟ, ನಾಟಕ ಪರಿಸರವೇ ಕಾಡಸಿದ್ಧೇಶ್ವರ ಕಾಲೇಜಿಗೆ ಪ್ರವೇಶ ಪಡೆಯಲು ಕಾರಣವಾಯಿತು, ನಾಟಕದ ಹವ್ಯಾಸ ಪ್ರಾರಂಭ. ಯುಥ್ ಫೆಸ್ಟಿವಲ್‌ಗಾಗಿ 'ಯುದ್ಧ' ನಾಟಕದಲ್ಲಿ ಅಭಿನಯದ ಜೊತೆಗೆ ನಿರ್ದೇಶನ, ನಾಟಕ ಪ್ರದರ್ಶನಗೊಂಡು ಮೆಚ್ಚುಗೆ ಪಡೆಯಿತು. ಪ್ರಥಮ ಬಹುಮಾನ, ಬೆಳ್ಳಿ ಪದಕ ಈ ನಾಟಕಕ್ಕೆ ದೊರಕಿತು ಎಂದರು.

ಅಂದಿನ ರಾಜ್ಯದ ಸಚಿವರೋರ್ವರು ನಾಟಕ ವೀಕ್ಷಿಸಿದ ನಂತರ ಆಡಿದ ಮೆಚ್ಚುಗೆಯ ಮಾತಿನಿಂದ ಖುಷಿಯಾದ ಡಾ. ಡಿ.ಎಸ್. ಕರ್ಕಿ ಗುರುಗಳು ನಾಟಕದ ತಾಲೀಮಿಗಾಗಿ ಮಾಡಿದ ಹೊಟೇಲಿನಲ್ಲಿ ಬೆಳೆದ ಬಿಲ್ ಚುಕ್ತಾ ಆದ ಪ್ರಸಂಗ ವಿವರಿಸಿದರು. ಕವನದ ಕಡೆಗೂ ವಾಲಿದೆ ಎಂದ ಅವರು, ಪ್ರಪ್ರಥಮ ಕವನ ಸಂಕಲನ 'ಕಾವ್ಯ ಕಲಾಪಿ'. ಎಂ.ಎ. ವ್ಯಾಸಂಗದಲ್ಲಿ ಡಾ. ಆರ್.ಸಿ. ಹಿರೇಮಠ, ಡಾ. ಸುಂಕಾಪೂರ, ವೃಷಭೇಂದ್ರ ಸ್ವಾಮಿಗಳು ಮುಂತಾದ ಗುರುಗಳಿಂದ ನಾಟಕದ ಉಪನ್ಯಾಸ ಕೇಳುವುದೇ ಒಂದು ಸೊಬಗು ಹಾಗೂ ಸವಿ. ಡಾ. ಎಂ.ಎಂ. ಕಲಬುರಗಿ, ಚಂದ್ರಶೇಖರ್ ಕಂಬಾರ, ಚಂಪಾ, ಪಟ್ಟಣಶೆಟ್ಟಿ, ಗಿರಡ್ಡಿ ಗೋವಿಂದರಾಜು ಸಹಪಾಠಿಗಳು ಎಂದರು.

ಈ ಸಂವಾದ ಕಾರ್ಯಕ್ರಮ ರಂಗದೇಗುಲ ವಿದ್ಯಾರ್ಥಿಗಳ ರಂಗಗೀತೆಯೊಂದಿಗೆ ಆರಂಭವಾಗಿ ಸುಮಾರು ಎರಡು ಗಂಟೆಗಳ ಕಾಲ ನಡೆಯಿತು. ಬೆಂಗಳೂರಿನ ರಂಗಭೂಮಿ ಕಲಾವಿದ ಚಿದಾನಂದ ಕುಲಕರ್ಣಿ ಹಾಗೂ ರಂಗಕರ್ಮಿ ಶಿವಾನಂದ ಇಂಗಳೇಶ್ವರ ಸಂವಾದ ನಡೆಸಿ ಕೊಟ್ಟರು.

***ದಿನಕರ ವರದಿ***

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ಹೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ದವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ. ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು–ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-


ರಾಷ್ಟ್ರದ ರಾಜಧಾನಿಯಲ್ಲಿ
ಕನ್ನಡಿಗರೊಬ್ಬರ ಬಹುವರ್ಣದ
ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು
ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ
ಕಾರ್ಯಗಳನ್ನು ಸಮಯಕ್ಕೆ
ಸರಿಯಾಗಿ ಅಚ್ಚುಕಟ್ಟಾಗಿ
ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್,
ಪ್ರಿಂಟಿಂಗ್ ಮತ್ತು ಬೈಂಡಿಂಗ್
ಕೆಲಸಗಳಿಗಾಗಿ ದಯವಿಟ್ಟು
ಸಂಪರ್ಕಿಸಿ

**SAUJANYA**
**PRINTING PRESS**
A HOUSE OF QUALITY PRINTING
Office :
C-95, Okhla Industrial Area
Phase-I, New Delhi – 110 020

Ph : 40520770
M : 9811104398, 9811604398

Delhi Karnataka Sangha Abhimata
July-2021, Vol. No.31, Issue No. 10, Price Rs.1/-
RNI Regn. No. 53405/91, DL-SW-1/4016/19-21
Date of Publication : July 8th / 9th, Posting Date : 10th / 11th, Total Pages-20, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y




ದೆಹಲಿ ಕರ್ನಾಟಕ ಸಂಘದ
ಆರ್ಟ್ ಗ್ಯಾಲರಿಯಲ್ಲಿ
ಇರುವ ಕಲಾವಿದ
ಬಿ.ಆರ್. ಪಾಟೀಲ್
ಅವರ ಕಲಾಕೃತಿ